# ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮೇ 2019
ಬೆಲೆ ರೂ. 1



ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ




## ಹರುಷ ತಂದ ಯುಗಾದಿ ಮಿಲನ

# ರಾಷ್ಟ್ರಪತಿ ಗೌರವ ಪ್ರಶಸ್ತಿ ಪಡೆದ ಕನ್ನಡದ ವಿದ್ವಾಂಸರು



ಡಾ. ಎಂ. ಚಿದಾನಂದಮೂರ್ತಿ



ಪ್ರೊ. ಷ. ಶೆಟ್ಟರ್



ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ




ಡಾ. ಮಂಜುನಾಥ

ಕೇಂದ್ರ ಸರ್ಕಾರವು ಪ್ರತಿವರ್ಷ ಭಾಷೆಯ ಬೆಳವಣಿಗೆ ಮತ್ತು ಅಧ್ಯಯನ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಹಿರಿಯ ವಿದ್ವಾಂಸರಿಗೆ (60ವರ್ಷ ಮೇಲ್ಪಟ್ಟ) ರಾಷ್ಟ್ರಪತಿಗಳ ಹೆಸರಿನಲ್ಲಿ 'ಸರ್ಟಿಫಿಕೇಟ್ ಆಫ್ ಹಾನರ್' ಎಂಬ ಪ್ರಶಸ್ತಿಪತ್ರ ಮತ್ತು 5ಲಕ್ಷ ರೂಪಾಯಿಗಳನ್ನು ನೀಡುತ್ತಿದೆ. ಅದೇ ರೀತಿ 45ವರ್ಷದೊಳಗಿನ ವಿದ್ವಾಂಸರಿಗೆ 'ಮಹರ್ಷಿ ಬಾದರಾಯಣ ವ್ಯಾಸ ಸಮ್ಮಾನ್' ಪ್ರಶಸ್ತಿಪತ್ರ ಮತ್ತು 1ಲಕ್ಷ ರೂಪಾಯಿಗಳನ್ನು ಸಂಸ್ಕೃತ, ಪಾಲಿ, ಪಾಕೃತ, ಅರೆಬಿಕ್, ಪರ್ಷಿಯನ್ ಭಾಷೆಗಳಿಗೆ ನೀಡುತ್ತಿತ್ತು. 2016ನೇ ಸಾಲಿನಿಂದ ಕನ್ನಡ, ತೆಲುಗು, ಮಲೆಯಾಳ ಭಾಷೆಗಳಿಗೂ ಈ ಪ್ರಶಸ್ತಿಗಳನ್ನು ವಿಸ್ತರಿಸಲಾಗಿದೆ.

2016ನೇ ಸಾಲಿನಲ್ಲಿ ಹಿರಿಯ ವಿದ್ವಾಂಸರಾದ ಪ್ರೊ. ಷ. ಶೆಟ್ಟರ್‌ರವರಿಗೆ 'ಸರ್ಟಿಫಿಕೇಟ್ ಆಫ್ ಹಾನರ್' ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಇದೇ ಸಾಲಿನ ಯುವ ಪ್ರತಿಭೆಯ ಪ್ರೋತ್ಸಾಹಕ್ಕೆ ನೀಡುವ 'ಮಹರ್ಷಿ ಬಾದರಾಯಣ ವ್ಯಾಸ ಸಮ್ಮಾನ್' ಪ್ರಶಸ್ತಿಯು ಡಾ. ಮಂಜುನಾಥರವರಿಗೆ ಲಭಿಸಿದೆ.

2017ನೇ ಸಾಲಿನಲ್ಲಿ ಹಿರಿಯ ವಿದ್ವಾಂಸರಾದ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ ಮತ್ತು 2018ನೇ ಸಾಲಿನಲ್ಲಿ ಹಿರಿಯ ವಿದ್ವಾಂಸರಾದ ಡಾ. ಎಂ. ಚಿದಾನಂದಮೂರ್ತಿ ಅವರು 'ಸರ್ಟಿಫಿಕೇಟ್ ಆಫ್ ಹಾನರ್' ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

4-4-2019ರಂದು ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಮೇಲಿನ ಎಲ್ಲ ವಿದ್ವಾಂಸರಿಗೆ ಉಪರಾಷ್ಟ್ರಪತಿಯವರು ಪುರಸ್ಕಾರವನ್ನು ನೀಡಿ ಗೌರವಿಸಿದರು.

*ಕೃಷ್ಣ ಚೆಂಗಡಿ*




ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ ಮತ್ತು ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ದಿನಾಂಕ 07.04.2018ರಂದು ನಡೆದ ಯುಗಾದಿ ಮಿಲನ ಕಾರ್ಯಕ್ರಮದ ಕೊನೆಯಲ್ಲಿ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಅಧ್ಯಕ್ಷ ಎ.ಟಿ. ಶ್ರೀನಿವಾಸ ಮಾತನಾಡುತ್ತಿರುವುದು

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪುಟ 29 ಸಂಚಿಕೆ 8
ಮೇ 2019

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

# ಸಂಪಾದಕೀಯ

## ಬುದ್ಧಿಜೀವಿಗಳ ಅಭಿವ್ಯಕ್ತಿ ಶಕ್ತಿ

ಇದು ರಾಜಕಾರಣಿಗಳ ಸತ್ವಪರೀಕ್ಷೆಯ ಸಮಯ. ಇದೀಗ ಜನರು ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳ ಕುರಿತು ಮುಕ್ತವಾಗಿ ಮಾತನಾಡುತ್ತಾರೆ. ಚುನಾವಣೆ ಘೋಷಣೆಯಾಗಿ ಫಲಿತಾಂಶ ಬರುವ ಅವಧಿಯ ನಡುವೆ 'ಪ್ರಜೆಗಳೇ ಪ್ರಭುಗಳು' ಎಂದು ಹೆಚ್ಚಾಗಿ ಅನಿಸುತ್ತದೆ. ಕಾರಣ ಇಲ್ಲಿ ಜನರು ಚರ್ಚಿಸುತ್ತಾರೆ ಮಾತ್ರವಲ್ಲ ಜನನಾಯಕರನ್ನು ಪ್ರಶ್ನಿಸುತ್ತಾರೆ. ಇದು ಒಂದರ್ಥದಲ್ಲಿ ರಾಜಕಾರಣಿಗಳ ಅರ್ಹತೆಯ ಮೌಲ್ಯಮಾಪನದ ಕಾಲ.

ಚುನಾವಣೆ ಸಮಯದಲ್ಲಿ ಬುದ್ಧಿಜೀವಿಗಳೂ ಮಾತನಾಡುತ್ತಾರೆ. ಜನಸಾಮಾನ್ಯರ ಮಾತಿಗಿಂತ ಬುದ್ಧಿಜೀವಿಗಳ ಹೇಳಿಕೆಗಳು ಮಹತ್ವ ಪಡೆಯುತ್ತದೆ. ಸಾಹಿತಿಗಳು, ವಿವಿಧ ವಿಷಯಗಳ ತಜ್ಞರು, ಸಾಂಸ್ಕೃತಿಕ ಜಗತ್ತಿನ ದಿಗ್ಗಜರು ಬುದ್ಧಿಜೀವಿ ವರ್ಗಕ್ಕೆ ಸೇರಿದ್ದಾರೆ. ಅವರ ರಾಜಕೀಯ ಕುರಿತ ಹೇಳಿಕೆಯನ್ನು ಜನರು ವಿಶೇಷವಾಗಿ ಪರಿಗಣಿಸುತ್ತಾರೆ. ಏಕೆಂದರೆ ಅವರ ಭಾಷಣಗಳು ಮತ್ತು ಬರಹಗಳು ಸಮಾಜದಲ್ಲಿ ಅಭಿಪ್ರಾಯವನ್ನು ರೂಪಿಸಬಲ್ಲದು. ಈ ಮೂಲಕ ಬುದ್ಧಿಜೀವಿಗಳ ನಡೆ ನುಡಿಗಳು ಆಯಾ ಕಾಲದ ಚುನಾವಣೆ ಮೇಲೆ ಪ್ರಭಾವ ಬೀರುತ್ತದೆ. ಅದು ಬುದ್ಧಿಜೀವಿಗಳ ಅಭಿವ್ಯಕ್ತಿ ಶಕ್ತಿ.

ಈ ಬಾರಿಯ ಚುನಾವಣೆಯಲ್ಲೂ ಬಲಪಂಥೀಯ ವಿಚಾರಧಾರೆಯ ಕನ್ನಡದ ಲೇಖಕ ಡಾ. ಎಸ್. ಎಲ್. ಭೈರಪ್ಪನವರಿಂದ ತೊಡಗಿ ಎಡಪಂಥೀಯ ವಿಚಾರಧಾರೆಯ ಅಮಾರ್ತ್ಯ ಸೇನ್‌ವರೆಗೂ ಬುದ್ಧಿಜೀವಿಗಳಿಂದ ರಾಜಕೀಯ ಕುರಿತ ಭಿನ್ನ ಹೇಳಿಕೆಗಳು ಬಂದಿವೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕನ್ನಡದ ಖ್ಯಾತ ಸಾಹಿತಿ ದಿ. ಡಾ. ಯು.ಆರ್. ಅನಂತಮೂರ್ತಿ ಅವರ 'ದೇಶ ಬಿಟ್ಟು ಹೋಗುವ' ಹೇಳಿಕೆ ರಾಷ್ಟ್ರವ್ಯಾಪಿ ಚರ್ಚೆಗೆ ಕಾರಣವಾಗಿತ್ತು. ನಂತರ ಅದು ಕೇವಲ ಭಾವನಾತ್ಮಕ ಹೇಳಿಕೆ ಹೊರತು, ಬೇರೇನೂ ಅಲ್ಲ ಎಂದು ಅವರು ಸ್ಪಷ್ಟನೆ ನೀಡಿದ್ದರು.

ಈ ನಡುವೆ ಕಳೆದ ಕೆಲವು ವರ್ಷಗಳಲ್ಲಿ ಕನ್ನಡದ ವಿದ್ವಾಂಸ ಡಾ. ಎಂ.ಎಂ. ಕಲಬುರ್ಗಿ, ಪತ್ರಕರ್ತೆ ಗೌರಿ ಲಂಕೇಶ್ ಸೇರಿದಂತೆ ದೇಶದಲ್ಲಿ ಬುದ್ಧಿಜೀವಿಗಳ ಹತ್ಯೆಯಾಗಿದೆ. ಇದನ್ನು 'ರಾಜಕೀಯ ಪ್ರೇರಿತ ಹತ್ಯೆ' ಎಂದೇ ನಂಬಲಾಗಿದೆ. ನಮಗೆ ಹಂತಕರ ಸುಳಿವು ಸಿಗದೆ ಹೋಗಿದ್ದು ವಿಷಾದಕರ. ಇದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕ್ರಮವೇ ಎಂದು ಅನುಮಾನಪಡುವಂತಾಗಿದೆ. ಮುಂದೆ ಹೀಗೆ ಆಗದಿರಲಿ. ಈ ನಿಟ್ಟಿನಲ್ಲಿ ಸಮಾಜಕ್ಕೆ ಮಾರ್ಗದರ್ಶನ ನೀಡುವ ಬುದ್ಧಿಜೀವಿಗಳನ್ನು ರಕ್ಷಿಸುವ ಮತ್ತು ಜನರು ವೈಚಾರಿಕವಾಗಿ ತೊಡಗಿಕೊಳ್ಳುವ ವಾತಾವರಣ ನಿರ್ಮಾಣವಾಗಬೇಕು.

ಕಾಲ ನಿಲ್ಲುವುದಿಲ್ಲ. ಈ ತಿಂಗಳ ಕೊನೆಯಲ್ಲಿ ಕೇಂದ್ರದಲ್ಲಿ ನೂತನ ಸರಕಾರ ಅಸ್ತಿತ್ವಕ್ಕೆ ಬರಲಿದೆ. ಕರ್ನಾಟಕದಿಂದ ನವ ಸಂಸದರು ದೆಹಲಿಗೆ ಬರಲಿದ್ದಾರೆ. ಅವರ ಜನಪರ ಕೆಲಸಗಳಿಗೆ ನಾವು ಶುಭ ಕೋರುವ. ಅಂತೆಯೇ ನೂತನ ಜನಪ್ರತಿನಿಧಿಗಳು ದೇಶದ ಸಾರಸ್ವತ ಲೋಕವನ್ನು ಗೌರವಿಸುತ್ತಾರೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತಾರೆ ಎಂದು ಆಶಿಸುವ. ಏಕೆಂದರೆ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಪಾತ್ರ ಬಹಳ ದೊಡ್ಡದು.

*ಡಾ. ಅವನೀಂದ್ರನಾಥ್ ರಾವ್*

### ಮುಖಪುಟ ಚಿತ್ರ

ದೆಹಲಿ ಕರ್ನಾಟಕ ಸಂಘ ಮತ್ತು ಗುರುಗಾಂವ್ ಕನ್ನಡ ಸಂಘ ಸಂಯುಕ್ತಾಶ್ರಯದಲ್ಲಿ ದಿನಾಂಕ 28.04.2019ರಂದು ಗುರುಗಾಂವ್‌ನಲ್ಲಿ ನಡೆದ ಯುಗಾದಿ ಸಾಂಸ್ಕೃತಿಕ ಮಿಲನ ಕಾರ್ಯಕ್ರಮದಲ್ಲಿ ಪುತ್ತೂರಿನ ಶ್ರೀದೇವಿ ನೃತ್ಯಾರಾಧನಾ ಕಲಾ ಕೇಂದ್ರದ ಕಲಾವಿದರಿಂದ ಪ್ರದರ್ಶನಗೊಂಡ ನೃತ್ಯದ ಒಂದು ದೃಶ್ಯ

*ಪ್ರಧಾನ ಸಂಪಾದಕ*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 29 ಸಂಚಿಕೆ 8
ಮೇ 2019, ಬೆಲೆ ರೂ. 1

## ನಮ್ಮನಮ್ಮೊಳಗೆ

# ಚುನಾವಣೆಯೆಂಬ ಗಲಿಬಿಲಿ ಪ್ರಪಂಚ

ದೇಶದ ತುಂಬೆಲ್ಲಾ ಈಗ ಚುನಾವಣೆಯ ಬಿರುಗಾಳಿ. ಏಳು ಹಂತಗಳ ಈ ಪ್ರಕ್ರಿಯೆಯಲ್ಲಿ ಕೊನೆಯ ಎರಡು ಹಂತಗಳು ಈಗ ಉಳಿದಿವೆ. ದಕ್ಷಿಣದಲ್ಲಿ ಚುನಾವಣೆಯ ಬಿಸಿ ಮುಗಿದಿದ್ದರೂ ಅರಿಯದ ಒಂದು ಬಗೆಯ ಆತಂಕದ ಪದರು ಮುಂದಿನ ಬೆಳವಣಿಗೆಯ ಕುರಿತಾಗಿ ಆವರಿಸಿದೆ. ಬಂಗಾಳ ಕೊಲ್ಲಿಯ ತುದಿಯಿಂದ ಉಗಮಿಸಿ ಬಂದ ಫೋನಿ ಸೈಕ್ಲೋನ್ ತಮಿಳುನಾಡು, ಆಂಧ್ರಪ್ರದೇಶ, ಒಡಿಸ್ಸಾ ಹಾಗೂ ಪಶ್ಚಿಮ ಬಂಗಾಳವನ್ನು ತನ್ನ ಅಗಾಧವಾದ ಉಸುರಿನಿಂದ ಸವರಿಕೊಂಡು ಬಂಗ್ಲಾದೇಶದತ್ತ ಉಲಿಯುತ್ತ ಸಾಗಿದ್ದು ಈ ಚುನಾವಣೆಯ ಕಾಲಕ್ರಮದಲ್ಲಿ ನಡೆದ ಇನ್ನೊಂದು ಮಹತ್ತರ ಘಟನೆ. ಈ ಫೋನಿಯ ಸೆರಗಿನಲ್ಲಿ ಒಡಿಸ್ಸಾದಲ್ಲಿ ನಡೆದ ರಾಜಕೀಯ ವಿದ್ಯಮಾನಗಳು ಚುನಾವಣೆಯ ಫಲಿಂತಾಶಕ್ಕೆ ಕನ್ನಡಿ ಹಿಡಿಯುವಂತಿವೆ.

ಉತ್ತರದಲ್ಲಿ ಬೇಸಿಗೆಯ ಹಸಿವು ಇನ್ನೂ ಉಗ್ರವಾಗುತ್ತ ನಡೆಯುವ ಈ ಕಾಲದಲ್ಲಿ ಇನ್ನೂ ಚುನಾವಣೆಯ ಕಾವು ಏರುತ್ತಿದೆ. ದೆಹಲಿಯಲ್ಲಿ ಮೇ 12 ರಂದು ಚುನಾವಣೆ ನಡೆದ ನಂತರ ಪ್ರಾರಂಭವಾಗುವ ರಾಜಕೀಯ ತಳಮಳ ಸೂರ್ಯನ ಅಗಾಧ ಪ್ರಖರತೆಯನ್ನು ನಾಚಿಸಿ ಬಿಡಬಹುದು. ಜನರ ಮನದಲ್ಲಿ ಏನಿದೆಯೋ? ಏನಿಲ್ಲವೋ? ಅಂತೂ ಇನ್ನು ಹತ್ತಾರು ದಿನಗಳಲ್ಲಿ ನಮ್ಮನ್ನಾಳುವ ಸರಕಾರ ರೂಪಗೊಳ್ಳಲಿದೆ. ಇರುವವರೇ ಬರುವರೋ? ಬೇಲಿಯ ಅತ್ತ ಕೂತವರು ಹಾರಿ ಬಂದು ಸತ್ತೆಗೆ ಲಗ್ಗೆ ಹಾಕುವರೋ? ಯಾರಿಗೆ ಎಷ್ಟು ಮೂಟೆ ದಕ್ಕುವುದೋ? ? ಒಟ್ಟಾರೆ ನಾವೆಲ್ಲ ಈಗ ಗಲಿಬಿಲಿಯ ಪ್ರಪಂಚದಲ್ಲಿ ಸಿಲುಕಿಕೊಂಡ ಪ್ರಜೆಗಳಾಗಿ ಬಿಟ್ಟಿದ್ದೇವೆ. ಈಗಾಗಲೇ ಒಬ್ಬರು ಇನ್ನೊಬ್ಬರ ಬೆನ್ನು ತಟ್ಟುವ ಕಾಯಕಲ್ಪ ಪ್ರಾರಂಭವಾಗಿದೆ.

ಈ ಚುನಾವಣೆಯ ಕಾಲದಲ್ಲಿ ನಮ್ಮ ದೇಶದ ಎಲ್ಲ ಘನವಾದ ಸಮಸ್ಯೆಗಳು ಮಂಚೂಣಿಗೆ ಬರುವುದು ಸಹಜ ಮತ್ತು ಸೂಕ್ತ ಎನ್ನುತ್ತ ನಾವೆಲ್ಲ ಕೈತೊಳೆದುಕೊಳ್ಳಬಹುದು. ನಿರುದ್ಯೋಗ, ರೈತರ ಹಾಹಾಕಾರ, ಅರ್ಥವ್ಯವಸ್ಥೆ...ಈ ಸಮಸ್ಯೆಗಳ ಮಹಾಪೂರದಲ್ಲಿ ರಾಮಮಂದಿರ, ದೇಶ ರಕ್ಷಣೆ...ಇತ್ಯಾದಿ ಇತ್ಯಾದಿಗಳೂ ಸೇರಿಕೊಂಡು ನಾವೆಲ್ಲ ನಮ್ಮ ಬದುಕನ್ನೆ ಅರ್ಥೈಸಿಕೊಳ್ಳುವಂತಾಗಿದೆ.

ಈ ಎಲ್ಲ ಗೊಂದಲಗಳಲ್ಲಿ ನಮ್ಮ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳು ಭಾಷೆ ಮತ್ತು ಸಂಸ್ಕೃತಿಗಳ ಬಗ್ಗೆ ತಮ್ಮ ಪ್ರಣಾಳಿಕೆಯಲ್ಲಿ ಏನಾದರೂ ಹೇಳುತ್ತಿಯವೇ? ಹೋಗಲಿ ಈಗ ನಡೆಯುತ್ತಿರುವ ಚುನಾವಣಾ ರಾಲಿಗಳಲ್ಲಿ ಈ ಕುರಿತಾಗಿ ಏನಾದರೂ ಚರ್ಚೆ ನಡೆಯುತ್ತಿದೆಯೆ? ಈಗ ಆಡಳಿತದಲ್ಲಿರುವ ಬಿಜೆಪಿ ಮತ್ತು ಅದಕ್ಕೆ ಸೆಡ್ಡು ಹೊಡೆಯಲು ಪ್ರಯತ್ನಿಸುತ್ತಿರುವ ಕಾಂಗ್ರೆಸ್ ತಮ್ಮ ಪ್ರಣಾಳಿಕೆಯಲ್ಲಿ ಭಾಷೆ ಮತ್ತು ಸಂಸ್ಕೃತಿಗಳ ಬಗ್ಗೆ ಹೇಳಿದ್ದನ್ನು ನಾವು ಗಮನಿಸಬೇಕು. ಈ ಪಕ್ಷಗಳ ಪ್ರಣಾಳಿಕೆಗಳಲ್ಲಿ (ಸುಮಾರು ನಲವತ್ತರಿಂದ ಐವತ್ತು ಪುಟಗಳಲ್ಲಿ) ದೇಶದ ಜನಸಮುದಾಯದ ಯಾವುದಕ್ಕೆ ಸ್ಪಂದಿಸುವುದೊ ಅಂತಹ ಸಮಸ್ಯೆಗಳಿಗೆ ಮತ್ತು ವಿಚಾರಗಳಿಗೆ ಮಾತ್ರ ಅನುವು ಮಾಡಿಕೊಡಲಾಗಿದೆ. ಅರ್ಥವ್ಯವಸ್ಥೆ, ದೇಶ ರಕ್ಷಣೆ, ರಾಮಮಂದಿರ ಎಲ್ಲವೂ ಬಿಜೆಪಿಯ ಪ್ರಣಾಳಿಕೆಯಲ್ಲಿದ್ದರೆ, ಕಾಂಗ್ರೆಸ್ಸಿನ ಪ್ರಣಾಳಿಕೆಯಲ್ಲಿ ನಿರುದ್ಯೋಗ, ಅರ್ಥವ್ಯವಸ್ಥೆ ಪ್ರಮುಖ ಜಾಗೆಯನ್ನು ಪಡೆದುಕೊಂಡಿದೆ. ಬಿಜೆಪಿಯ ಪ್ರಣಾಳಿಕೆಯಲ್ಲಿ ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಬಗ್ಗೆ ಬರೆಯುತ್ತ, ಸಂಸ್ಕೃತಕ್ಕೆ ವಿಶೇಷ ಸ್ಥಾನಮಾನಗಳನ್ನು ನೀಡುವುದರ ಬಗ್ಗೆ ಮತ್ತು ಅದರ ಕಲಿಕೆಯ ಬಗ್ಗೆ ಒತ್ತು ನೀಡುವುದರ ಕುರಿತಾಗಿ ಬರೆಯಲಾಗಿದೆ. ಕಾಂಗ್ರೆಸ್ಸಿನ ಪ್ರಣಾಳಿಕೆಯಲ್ಲಿ ನಮ್ಮ ದೇಶದ ವೈವಿಧ್ಯತೆಯನ್ನು ಕಾಪಾಡಿಕೊಂಡು ಬರಬೇಕಾದ್ದರ ಬಗ್ಗೆ ವಿಶೇಷವಾದ ಒತ್ತು ನೀಡಿದ್ದರೂ, ಭಾಷೆ ಮತ್ತು ಸಂಸ್ಕೃತಿಗಳ ಕುರಿತಾಗಿ ಯಾವ ನಿರ್ದಿಷ್ಟ ವಿಚಾರಗಳು ಇರಲಿಲ್ಲ.

ದೇಶದ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳನ್ನು ಸಮೀಕ್ಷಿಸಿದಾಗ ನಮಗೆ ಕಾಣ ಬರುವುದು ಅವರ ನಮ್ಮ ದೇಶದ ನೂರಾರು-ಸಾವಿರಾರು ಭಾಷೆಗಳ ಮತ್ತು ಉಪಭಾಷೆಗಳ ಕುರಿತಾದ ದಿವ್ಯ ನಿರ್ಲಕ್ಷ. ಬಹುಶಃ ಇದು ಒಂದು ಬಗೆಯಲ್ಲಿ ಸಹಜವೂ ಹೌದು. ದೇಶದ ಪ್ರಮುಖ ಪಕ್ಷಗಳು ಸ್ಥಳೀಯ ಜನಸಮುದಾಯಗಳ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ತಮ್ಮ ಚುನಾವಣಾ ತಂತ್ರಗಳನ್ನು ರೂಪಿಸುವುದಿಲ್ಲ. ದೆಹಲಿಯಲ್ಲಿರುವ ಆಮ್ ಆದ್ಮಿ ಪಕ್ಷದವರು ತಾವು ಜನರಿಂದ ಅವರ ಸೂಚನೆಗಳನ್ನು ಒಟ್ಟು ಮಾಡಿಕೊಂಡು ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೆ ಅವರದ್ದೇ ಆದ ಪ್ರಣಾಳಿಕೆಗಳನ್ನು ತಯಾರಿಸುತ್ತೇವೆಂದು ಹೇಳಿಕೊಂಡರೂ ಅದು ಸರಿಯಾದ ರೀತಿಯಲ್ಲಿ ಊರ್ಜಿತಕ್ಕೆ ಬಂದಂತೆ ತೋರುವುದಿಲ್ಲ. ಹಾಗೆ ನೋಡಿದರೆ, ನಮ್ಮ ದೇಶದಲ್ಲಿ ನಮಗೆಲ್ಲ 542 ಪ್ರಣಾಳಿಕೆಗಳು ಬೇಕು. ಅಷ್ಟಾಗದಿದ್ದರೂ, ಪ್ರತಿಯೊಂದು ಪ್ರಾದೇಶಿಕ ಸಂಸ್ಥಾನಗಳಗಾದರೂ ಈ ಪಕ್ಷಗಳು ತಮ್ಮ ಪ್ರಣಾಳಿಕೆಗಳನ್ನು ರೂಪಿಸುವಂತಾದರೆ ನಮ್ಮ ಭಾಷಾಸಂಸ್ಕೃತಿಗಳಿಗೂ ಒಂದು ಪ್ರಾಮುಖ್ಯತೆ ಬಂದಂತಾಗುತ್ತದೆ.

ನಮ್ಮ ದೇಶಕ್ಕೆ ಸ್ವಾತಂತ್ರ ಬಂದ ಮೇಲೆ ನಾವೆಲ್ಲ ಭಾಷೆಯ ತಳಹದಿಯ ಮೇಲೆ ರಾಜ್ಯವಾರು ವಿಂಗಡನೆಯನ್ನು ಮಾಡಿಕೊಂಡೆವು. ಅದು ಹಲವಾರು ಕಾಲ ಚುನಾವಣೆಯ ಪ್ರಮುಖ ಪ್ರಚಾರ ಮಾಧ್ಯಮವಾಗಿತ್ತು. ಅದರ ಜಾಗೆಯಲ್ಲಿ ಈಗ ಬೇರೆ ವಿಚಾರಗಳು (ಮೇಲೆ ಹೇಳಿದಂತಹ) ಬಂದಿವೆ. ಆದರೆ, ನಮ್ಮ ಈಶಾನ್ಯ ರಾಜ್ಯಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಅವರ ಸಂಸ್ಕೃತಿ ಮತ್ತು ಭಾಷೆಗಳು ಇನ್ನೂ ಚುನಾವಣೆಯ ಭಾಗಗಳಾಗಿವೆ. ನಮ್ಮ ದೇಶದ ಇತರ ಭಾಗಗಳಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ಈ ಕುರಿತಾಗಿ ಇನ್ನೂ ವಿಸ್ತೃತವಾದ ಚರ್ಚೆಯಾಗಬೇಕಾಗಿದೆ. ಗಡಿನಾಡ ಕನ್ನಡಿಗರ ಸಮಸ್ಯೆಗಳು ಈಗ ಹೆಚ್ಚು ಚರ್ಚಿತವಾಗುತ್ತಿಲ್ಲ. ರಾಷ್ಟ್ರೀಯತೆಯತ್ತ ನಮ್ಮನ್ನು ಸೆಳೆಯಲಾಗುತ್ತಿದೆ. ಈ ಕುರಿತಾಗಿ ನಮ್ಮೆಲ್ಲರ ನಡುವೆ ವ್ಯಾಪಕವಾದ ಸಂವಾದದ ಅಗತ್ಯವಿದೆ.

*ಡಾ. ವೆಂಕಟಾಚಲ ಹೆಗಡೆ*
**ಅಧ್ಯಕ್ಷರು**

## ಮುನ್ನೋಟ

ಸಮಸ್ತ ಕನ್ನಡಿಗರಿಗೆ ಬಸವ ಜಯಂತಿಯ ಶುಭಾಶಯಗಳು. 2018-19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 10 ಮತ್ತು 12ನೇ ತರಗತಿಯಲ್ಲಿ ದೆಹಲಿ ಮತ್ತು ಎನ್.ಸಿ.ಆರ್.ನ ಕನ್ನಡಿಗರ ಮಕ್ಕಳು ಅತೀ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಮತ್ತು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು ಹಾಗೂ ಅವರ ಮುಂದಿನ ಭವಿಷ್ಯ ಇನ್ನೂ ಒಳ್ಳೆಯದಾಗಲಿ ಎಂದು ಶುಭ ಹಾರೈಸುತ್ತೇನೆ.

ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ ಜೊತೆಗೂಡಿ ಯುಗಾದಿ ಮಿಲನ ಕಾರ್ಯಕ್ರಮ, ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಜೊತೆಗೂಡಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 128ನೇ ಜಯಂತಿ ಆಚರಣೆ, ಗುರುಗಾಂವ್ ಕನ್ನಡ ಸಂಘದ ಜೊತೆಗೆ ಯುಗಾದಿ ಮಿಲನ ಕಾರ್ಯಕ್ರಮ ಹೀಗೆ ದೆಹಲಿಯ ಹಲವು ಸಂಘ ಸಂಸ್ಥೆಗಳ ಜೊತೆಗೂಡಿ ಕಾರ್ಯಕ್ರಮಗಳನ್ನು ಮಾಡಲಾಗಿದೆ. ಈ ಎಲ್ಲ ಸಂಯುಕ್ತ ಕಾರ್ಯಕ್ರಮಗಳು ಯಶಸ್ವಿಯಾಗಿದೆ.

ದೆಹಲಿ ಎನ್.ಸಿ.ಆರ್. ಕನ್ನಡಿಗರನ್ನು ಒಟ್ಟುಗೂಡಿಸುವ ಸಲುವಾಗಿ ಕನ್ನಡಿಗರ ಮನೆಬಾಗಿಲಿಗೆ ವಿಶೇಷ ಕಾರ್ಯಕ್ರಮದ ಅಡಿಯಲ್ಲಿ ಗುರುಗಾಂವ್‌ನಲ್ಲಿ ಹಮ್ಮಿಕೊಂಡ ಯುಗಾದಿ ಸಾಂಸ್ಕೃತಿಕ ಮಿಲನ ಕಾರ್ಯಕ್ರಮ 500ಕ್ಕೂ ಹೆಚ್ಚು ಕನ್ನಡಿಗರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಗಿದೆ. ಈ ಮೂರು ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಲು ಬಂದ ಶ್ರೀದೇವಿ ನೃತ್ಯಾರಾಧನ ಕಲಾ ಕೇಂದ್ರ ತಂಡಕ್ಕೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅನಂತ ಧನ್ಯವಾದಗಳು ಮತ್ತು ಶುಭಾಶಯಗಳು.

ಅಕ್ಕಮಹಾದೇವಿ ಮತ್ತು ಬಸವಣ್ಣ ಅವರ ಜಯಂತಿಯನ್ನು ಪ್ರತೀ ವರ್ಷದಂತೆ ಈವರ್ಷ ಇದೇ ಮೇ 19ರಂದು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಅತೀ ಹೆಚ್ಚು ಕನ್ನಡಿಗರು ಭಾಗವಹಿಸಿ ವಿಶ್ವಮಾನವ ಬಸವಣ್ಣ ಮತ್ತು ಅಕ್ಕ ಜಯಂತಿ ಕಾರ್ಯಕ್ರಮವನ್ನು ಯಶಸ್ವಿಗೊಳಸಬೇಕಾಗಿ ವಿನಂತಿ. ದೆಹಲಿ ಕನ್ನಡಿಗರು ಹೆಚ್ಚಾಗಿ ಬೇಸಿಗೆಯ ಈ ದಿನದಲ್ಲಿ ತಮ್ಮ ತಮ್ಮ ಊರುಗಳಿಗೆ ಹೋಗುವುದರಿಂದ ಸಂಘದಲ್ಲಿ ಕಾರ್ಯಕ್ರಮಗಳು ಕಡಿಮೆ. ಜುಲೈ ತಿಂಗಳಿನಿಂದ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

2019 ಮೇ 19
ಭಾನುವಾರ
ಸಂಜೆ : 5.30 ಗಂಟೆಗೆ

**ಬಸವ ಜಯಂತಿ ಮತ್ತು ಅಕ್ಕಮಹಾದೇವಿ ಜಯಂತಿ ಆಚರಣೆ**

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಮೇ, 2019ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಮೇ, 2019ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 26 ಮೇ, 2019ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 26 ಮೇ, 2019ರಂದು ಸಾಯಂಕಾಲ 4 ಗಂಟೆಯಿಂದ.

## ಅವನಿ ರಸಿಕರ ರಂಗ ಧಾರವಾಡ

### ಪ್ರಕಟಣೆ

**ರಾಜ್ಯಮಟ್ಟದ ದಿ. ದೇವಾಂಗನಾ ಶಾಸ್ತ್ರಿ ಸ್ಮಾರಕ ಲೇಖಕಿಯರ ಪ್ರಥಮ ಕಥಾ ಸಂಕಲನಗಳ ಸ್ಪರ್ಧೆ- ಅರ್ಜಿ ಆಹ್ವಾನ**

ಧಾರವಾಡದ ಅವನಿ ರಸಿಕರ ರಂಗ ವೇದಿಕೆಯು, ಪ್ರತಿವರ್ಷದಂತೆ, ದಿ. ದೇವಾಂಗನಾ ಶಾಸ್ತ್ರಿ ಸ್ಮರಣಾರ್ಥ ಕನ್ನಡ ಲೇಖಕಿಯರ ಪ್ರಪ್ರಥಮ ಕಥಾಸಂಕಲನಗಳ ಸ್ಪರ್ಧೆಗಾಗಿ ಲೇಖಕಿಯರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಕನ್ನಡದ ಅಪ್ರತಿಮ ಕಥೆಗಾರ್ತಿಯಾಗಿದ್ದ ದಿ. ದೇವಾಂಗನಾ ಶಾಸ್ತ್ರಿಯವರ ಸ್ಮರಣಾರ್ಥ ಆಯೋಜಿಸಿರುವ ಈ ಕಥಾಸಂಕಲನಗಳ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಆಯಾ ವರ್ಷಗಳ ಕಥಾ ಸಂಕಲನಕ್ಕೆ ಪ್ರತ್ಯೇಕವಾಗಿ 5000/- ರೂಗಳ ನಗದು ಬಹುಮಾನವನ್ನು ಪ್ರಶಸ್ತಿ ಪತ್ರದೊಂದಿಗೆ ಧಾರವಾಡದಲ್ಲಿ ಆಯೋಜಿಸಲಿರುವ ಸಮಾರಂಭದಲ್ಲಿ ನೀಡಲಾಗುವುದು. ಅನುವಾದಿತ ಕಥಾಸಂಕಲನಗಳಿಗೆ ಈ ಸ್ಪರ್ಧೆಯಲ್ಲಿ ಅವಕಾಶವಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ 2015, 2016, 2017 ಮತ್ತು 2018ರಲ್ಲಿ ಪ್ರಕಟಗೊಂಡಿರಬೇಕು.(ಸ್ಪರ್ಧೆಗಾಗಿ ಕಳುಹಿಸಲಿರುವ ಕಥಾಸಂಕಲನವು ಆಯಾ ವರ್ಷದ ಜನವರಿ-ಡಿಸೆಂಬರ ಕಾಲಾವಧಿಯಲ್ಲಿ ಪ್ರಕಟಗೊಂಡಿರಬೇಕು).

ಮೇಲ್ಕಾಣಿಸಿದ 4 ವರ್ಷಗಳ ಕಲಾವಧಿಯಲ್ಲಿ ಪ್ರಕಟಗೊಂಡ ಕನ್ನಡ ಲೇಖಕಿಯರ ಚೊಚ್ಚಲ ಕಥಾ ಸಂಕಲನಗಳ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ 4 ಕಥಾಸಂಕಲನಗಳಿಗೆ 4 ಪ್ರತ್ಯೇಕ ಬಹುಮಾನಗಳನ್ನು ನೀಡಲಾಗುವುದು. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ಲೇಖಕಿಯರು ತಮ್ಮ ಚೊಚ್ಚಲ ಕಥಾಸಂಕಲನದ 4 ಪ್ರತಿಗಳೊಂದಿಗೆ ತಮ್ಮ ಅಂಚೆ ವಿಳಾಸ, ದೂರವಾಣಿ ಸಂಪರ್ಕಗಳನ್ನೊಳಗೊಂಡ ಇತ್ಯಾದಿ ವಿವರಗಳನ್ನು ತಾವು ಕಳುಹಿಸುವ ಪುಸ್ತಕಗಳ ಜೊತೆಯಲ್ಲಿ ಲಗತ್ತಿಸಬೇಕು.

ಕಥಾಸಂಕಲನಗಳನ್ನು ಆಯ್ಕೆ ಮಾಡಲು ಪ್ರತಿಷ್ಠಿತ ವ್ಯಕ್ತಿಗಳ ಒಂದು ಸಮಿತಿಯನ್ನು ರಚಿಸಲಾಗುವುದು. ಈ ಆಯ್ಕೆ ಸಮಿತಿಯ ನಿರ್ಣಯವು ಅಂತಿಮ. ಈ ನಿರ್ಣಯವನ್ನು ಯಾರೂ ಪ್ರಶ್ನಿಸುವಂತಿಲ್ಲ. ಆಯ್ಕೆಯಾದ ಬಹುಮಾನಿತ ಕಥಾಸಂಕಲನಕ್ಕೆ ಧಾರವಾಡದಲ್ಲಿ ಜರುಗುವ ಸಾಹಿತ್ಯ ಸಮಾರಂಭದಲ್ಲಿ ಸಂಬಂಧಪಟ್ಟ ಲೇಖಕಿಯರನ್ನು ಸತ್ಕರಿಸಿ ಬಹುಮಾನವನ್ನು ವಿತರಿಸಲಾಗುವುದು. ಜುಲೈ 15ರೊಳಗಾಗಿ ಕಥಾಸಂಕಲನದ 4 ಪ್ರತಿಗಳನ್ನು ಕೆಳಗೆ ಕಾಣಿಸಿದ ವಿಳಾಸಕ್ಕೆ ಕಳುಹಿಸಬೇಕು. ನಂತರ ಬಂದ ಕಥಾಸಂಕಲನವನ್ನು ಗಮನಿಸುವುದಿಲ್ಲ.

**ವಿಳಾಸ :-**

**ಗೌರವಾಧ್ಯಕ್ಷರು, ಅವನಿ ರಸಿಕರ ರಂಗ, "ಅವನಿ" 217, 2ನೆಯ ಮುಖ್ಯ ರಸ್ತೆ, 3ನೆಯ ಅಡ್ಡರಸ್ತೆ, ನಾರಾಯಣಪುರ, ಧಾರವಾಡ- 8, ದೂರವಾಣಿ - 0836-2472131**

*ಡಾ. ಯಶೋದಾ ಭಟ್ಟ*
ಗೌರವಾಧ್ಯಕ್ಷರು, ಅವನಿ ರಸಿಕರ ರಂಗ, ಧಾರವಾಡ

# ಆನಂದಕಂದರ ಸಾಹಿತ್ಯಿಕ ವ್ಯಕ್ತಿತ್ವ ವಿಚಾರ ಸಂಕಿರಣ



ಕನ್ನಡ ಸಾರಸ್ವತ ಲೋಕದಲ್ಲಿ 'ಆನಂದಕಂದ' ಕಾವ್ಯನಾಮದ ಮೂಲಕ ಅನನ್ಯ ಸಾಧನೆ ಮಾಡಿದ ಹಿರಿಯ ಸಾಹಿತಿ ಡಾ. ಬೆಟಗೇರಿ ಕೃಷ್ಣ ಶರ್ಮ ಅವರ ಸಾಹಿತ್ಯಕ ವ್ಯಕ್ತಿತ್ವ ಕುರಿತ ವಿಚಾರ ಸಂಕಿರಣ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯಿತು.

ದಿನಾಂಕ 14.04.2019ರಂದು ಡಾ. ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಪ್ರತಿಷ್ಠಾನ, ಬೆಳಗಾವಿ ಮತ್ತು ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ಈ ವಿಚಾರ ಸಂಕಿರಣದ ಜೊತೆಗೆ ಆನಂದಕಂದರ ಗೀತೆಗಳ ಗಾಯನವೂ ಜರಗಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ. ಪುರುಷೋತ್ತಮ ಬಿಳಿಮಲೆ ಅವರು ನಮಗೆ ತಿಳಿದಿರುವ ಶ್ರೇಷ್ಠ ಸಾಹಿತಿಗಳಾದ ಕುವೆಂಪು, ಕಾರಂತ, ಬೇಂದ್ರೆ ಮೊದಲಾದವರೊಂದಿಗೆ ಅವರಂತೆ ಕನ್ನಡ ಸಾಹಿತ್ಯವನ್ನು ಬೆಳಗಿದ ಡಾ. ಬೆಟಗೇರಿ ಕೃಷ್ಣ ಶರ್ಮಾರಂತಹ ಮಹನೀಯರ ಸಾಹಿತ್ಯ ಮತ್ತು ಬದುಕನ್ನು ತಿಳಿದುಕೊಳ್ಳುವ ಕೆಲಸ ಆಗಬೇಕು. ಕರ್ನಾಟಕ ಸರಕಾರವು ಆನಂದಕಂದರ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿದ್ದು ಒಳ್ಳೆಯ ಬೆಳವಣಿಗೆ ಎಂದರು. ಕನ್ನಡ ಸಾಹಿತ್ಯದ ನವೋದಯ ಕಾಲದ ಶ್ರೇಷ್ಠ ಸಾಹಿತಿ ಆನಂದಕಂದರು ಎಂದು ಅವರು ಸ್ಮರಿಸಿದರು.



ಉದ್ಘಾಟನಾ ಭಾಷಣ ಮಾಡಿದ
ಡಾ. ಪುರುಷೋತ್ತಮ ಬಿಳಿಮಲೆ

ಪ್ರಾಸ್ತಾವಿಕ ಭಾಷಣದಲ್ಲಿ ಹಿರಿಯ ಸಾಹಿತಿ ಡಾ. ಸರಜೂ ಕಾಟ್ಕರ್ ಅವರು ಬೆಳುವಲದ ಸೀಮೆಯಲ್ಲಿ ಆನಂದಕಂದರ ಸಾಹಿತ್ಯಿಕ ವ್ಯಕ್ತಿತ್ವ ರೂಪುಗೊಂಡ ಬಗೆಯನ್ನು ಮಂಡಿಸಿದರು. ಕಾವ್ಯ ಮತ್ತು ಕಥನದ ಮೂಲಕ ಸಾಹಿತ್ಯ ನಿರ್ಮಿತಿ ಮತ್ತು 'ಜಯಂತಿ' ಮಾಸಪತ್ರಿಕೆಯ ಮೂಲಕ ಅವರು ಸಾಹಿತ್ಯದಲ್ಲಿ ಹೊಸಮಾರ್ಗವನ್ನು ನಿರ್ಮಿಸಲು ಪ್ರೇರಕ ಶಕ್ತಿಯಾಗಿದ್ದರು ಎಂದು ವಿವರಿಸಿದರು.



ಪ್ರಾಸ್ತಾವಿಕವಾಗಿ ಮಾತನಾಡಿದ
ಡಾ. ಸರಜೂ ಕಾಟ್ಕರ್

ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮಾತನಾಡಿ ಸುಶಿಕ್ಷಿತ ಸಮಾಜ ನಿರ್ಮಾಣ ಹಾಗೂ ಕರ್ನಾಟಕದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿರುಚಿಯನ್ನು ಬೆಳೆಸುವಲ್ಲಿ ಆನಂದಕಂದರ ಪಾತ್ರಮಹತ್ವದ್ದು ಎಂದು ಬಣ್ಣಿಸಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಡಾ. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್‌ನ ಅಧ್ಯಕ್ಷ ಪ್ರೊ. ರಾಘವೇಂದ್ರ ಪಾಟೀಲ ಮಾತನಾಡಿ ಈಗಾಗಲೇ ಟ್ರಸ್ಟ್ ಮೂಲಕ ಆನಂದಕಂದರ ಸಮಗ್ರ ಸಾಹಿತ್ಯದ ಪ್ರಕಟಣೆಗಳನ್ನು ಹೊರತರಲಾಗಿದೆ. ಆನಂದಕಂದರ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಲು ನೆರವಾದ ದೆಹಲಿ ಕರ್ನಾಟಕ ಸಂಘಕ್ಕೆ ಕೃತಜ್ಞತೆಯನ್ನು ಹೇಳಿದರು.

ಆರಂಭದಲ್ಲಿ ಖ್ಯಾತಗಾಯಕರಾದ ಉಪಾಸನಾ ಮೋಹನ ಮತ್ತು ಪಂಚಮ್ ಹಳಬಂಡಿ ಇವರು ಆನಂದಕಂದರ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬೆಟಗೇರಿ ಟ್ರಸ್ಟ್‌ನ ಶ್ರೀಶೈಲ ಕರಿಶಂಕರಿ ಅವರು ಸ್ವಾಗತಿಸಿದರು. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್‌ನ ಸದಸ್ಯೆ ಶ್ರೀಮತಿ ಆಶಾ ಕಡಪಟ್ಟಿ ಕಾರ್ಯಕ್ರಮ ನಿರೂಪಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

# ಆನಂದಕಂದರು ತೆರೆದ ಮನಸ್ಸಿನ ಲೋಕಜ್ಞಾನಿ

## -ಪ್ರೊ. ರಾಘವೇಂದ್ರ ಪಾಟೀಲ



ಡಾ. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್‌ನ ಅಧ್ಯಕ್ಷ ಪ್ರೊ. ರಾಘವೇಂದ್ರ ಪಾಟೀಲ ಅವರನ್ನು ಅಭಿನಂದಿಸಲಾಯಿತು

ಆನಂದಕಂದರ ಜೀವನ ಕಷ್ಟ ಕೋಟಲೆಗಳಿಂದ ತುಂಬಿತ್ತು. ಪ್ಲೇಗು ಎಂಬ ಮಾರಣಾಂತಿಕ ರೋಗದಿಂದ ಬದುಕುಳಿದು ಜೀವನ ಪರ್ಯಂತ ಕೈಕಾಲುಗಳ ಕಂಪನವನ್ನು ಹೊಂದಿದ್ದರು. ಆದರೆ ನಾಡು-ನುಡಿಗೆ ಅವರು ಅಪಾರ ಕೊಡುಗೆ ನೀಡುವುದನ್ನು ಯಾವುದೂ ತಡೆಯಲಾಗಲಿಲ್ಲ ಎಂದು ಹಿರಿಯ ಸಾಹಿತಿ, ಡಾ. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್ ಅಧ್ಯಕ್ಷ ಪಾಟೀಲರು ಮಾರ್ಮಿಕವಾಗಿ ಹೇಳಿದರು.

ಅವರು ದಿನಾಂಕ 14.04.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ 'ಆನಂದಕಂದರ ಸಾಹಿತ್ಯಕ ವ್ಯಕ್ತಿತ್ವ' ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಬಡತನದಿಂದ ಮುಲ್ಕಿ ಪರೀಕ್ಷೆ ಅಂದರೆ ಏಳನೇ ತರಗತಿಯಷ್ಟೇ ಓದಿಕೊಂಡಿದ್ದ ಕೃಷ್ಣ ಶರ್ಮರು ತಮ್ಮ ತೆರೆದ ಮನಸ್ಸು ಮತ್ತು ಆಸಕ್ತಿಯ ಕಾರಣದಿಂದ ಜನಪದದಿಂದ ಲೋಕ ಜ್ಞಾನವನ್ನು ಪಡೆದರು. ಈ ಮೂಲಕ ಸೃಜನಶೀಲ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿದರು ಎಂದು ಪಾಟೀಲರು ಆನಂದಕಂದರ ಜೀವನ, ಕಾವ್ಯ, ಕಾದಂಬರಿ ಮತ್ತು ಪತ್ರಿಕಾ ವ್ಯವಸಾಯದ ಕುರಿತು ಬೆಳಕು ಚೆಲ್ಲಿದರು.



ಸಮಾರೋಪ ಭಾಷಣ ಮಾಡಿದ ಡಾ. ಟಿ.ಎಸ್. ಸತ್ಯನಾಥ್

ಬೆಟಗೇರಿ ಟ್ರಸ್ಟ್‌ನ ಸದಸ್ಯರೂ ಆಗಿರುವ ಪ್ರೊ. ಚಂದ್ರಶೇಖರ ವಸ್ತ್ರದ ಅವರು ಆನಂದಕಂದರ ಕಥನ ಮತ್ತು ಡಾ. ಸಿ.ಕೆ. ನಾವಲಗಿ ಅವರು ಆನಂದಕಂದರ ಜಾನಪದ ಮತ್ತು ಸಂಸ್ಕೃತಿ ಅಧ್ಯಯನದ ಕೊಡುಗೆ ಕುರಿತು ಉಪನ್ಯಾಸ ನೀಡಿದರು.


ಸಮಾರೋಪ ಭಾಷಣ ಮಾಡಿದ ದೆಹಲಿ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಮತ್ತು ಚಿಂತಕ ಡಾ. ಟಿ.ಎಸ್. ಸತ್ಯನಾಥ್ ಮಾತನಾಡಿ ಆನಂದಕಂದರ ಸಾಹಿತ್ಯದಲ್ಲಿ ಇರುವ ಪ್ರಯೋಗಶೀಲತೆ ಮತ್ತು ನವೀನ ಮಾದರಿಗಳನ್ನು ಅವರು ಬೆಳೆದು ಬಂದ ಬೆಳುವಲದ ಪರಿಸರದ ಹಿನ್ನೆಲೆಯಲ್ಲಿ ನೋಡಬೇಕಾದ ಅಗತ್ಯವಿದೆ. ಈ ಕುರಿತು ಇನ್ನಷ್ಟು ಅಧ್ಯಯನ ಆಗಬೇಕು ಎಂದು ಅಭಿಪ್ರಾಯಪಟ್ಟರು.

ನಂತರ ನಡೆದ ಆನಂದಕಂದರ ಗೀತಗಾಯನ ಕಾರ್ಯಕ್ರಮದಲ್ಲಿ ಬೆಂಗಳೂರಿನ ಖ್ಯಾತಗಾಯಕರಾದ ಉಪಾಸನಾ ಮೋಹನ ಮತ್ತು ಪಂಚಮ್ ಹಳಬಂಡಿ ಅವರು ಕವಿಯ ಕೆಲವು ವಿಶಿಷ್ಟ ಕವಿತೆಗಳನ್ನು ಸುಮಧುರವಾಗಿ ಹಾಡಿದ್ದು ವಿಶೇಷವಾಗಿತ್ತು. ಡಾ. ವೆಂಕಟಾಚಲ ಹೆಗಡೆ ಅವರು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್‌ನ ಸದಸ್ಯೆ ಶ್ರೀಮತಿ ಆಶಾ ಕಡಪಟ್ಟಿ ಕಾರ್ಯಕ್ರಮ ನಿರೂಪಿಸಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

*ಡಾ. ಅವನೀಂದ್ರನಾಥ್ ರಾವ್*



ಖ್ಯಾತ ಗಾಯಕರಾದ ಉಪಾಸನಾ ಮೋಹನ ಮತ್ತು ಪಂಚಮ್ ಹಳಬಂಡಿ ಅವರ ಗೀತ ಗಾಯನ





ಉಪನ್ಯಾಸ ನೀಡಿದ ಪ್ರೊ. ಚಂದ್ರಶೇಖರ ವಸ್ತ್ರದ ಮತ್ತು ಡಾ. ಸಿ.ಕೆ. ನಾವಲಗಿ

# ಭಾಷೆಯ ಅರಿವು ಮುಖ್ಯ, ಆರಾಧನೆ ಬೇಡ

## 'ಹಿರಿಯ ವಿದ್ವಾಂಸರಿಗೆ ಅಭಿನಂದನೆ' ಕಾರ್ಯಕ್ರಮದಲ್ಲಿ ಪ್ರೊ. ಷ. ಶೆಟ್ಟರ್




ನಮ್ಮ ಭಾಷೆಯ ಬಗೆಗೆ ತಿಳಿದುಕೊಳ್ಳಬೇಕು. ಆದರೆ ನಮ್ಮ ಭಾಷೆಯೇ ಶ್ರೇಷ್ಟ ಎಂದು ಆರಾಧಿಸುವುದರಿಂದ ಪ್ರಯೋಜನವಿಲ್ಲ ಎಂದು ಹಿರಿಯ ಭಾಷಾ ತಜ್ಞ, ಇತಿಹಾಸಕಾರ, ಸಂಸ್ಕೃತಿ ಚಿಂತಕ ಪ್ರೊ. ಷ. ಶೆಟ್ಟರ್ ಅಭಿಪ್ರಾಯಪಟ್ಟಿದ್ದಾರೆ.

ದಿನಾಂಕ 03.04.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಹಿರಿಯ ವಿದ್ವಾಂಸರಾದ ಡಾ. ಎಂ. ಚಿದಾನಂದ ಮೂರ್ತಿ, ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಪ್ರೊ. ಷ. ಶೆಟ್ಟರ್ ಮತ್ತು ಡಾ. ಮಂಜುನಾಥ್ ಅವರಿಗೆ ಜರಗಿಸಲಾದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕನ್ನಡ ಭಾಷೆಯೊಂದಿಗೆ ಭಾರತದ ಇತರ ಭಾಷೆಗಳ ಬಗೆಗೂ ನಾವು ತಿಳಿದುಕೊಳ್ಳಬೇಕು. ಆ ಮೂಲಕ ಕನ್ನಡ ಭಾಷೆಯ ಶ್ರೇಷ್ಟತೆಯನ್ನು ಅರಿಯಬೇಕು ಎಂದು ಪ್ರೊ. ಷ. ಶೆಟ್ಟರ್ ವಿವರಿಸಿದರು.

ಪ್ರೊ. ಶೆಟ್ಟರ್ ಅವರ ಈ ಹೇಳಿಕೆ ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿಯವರೊಂದಿಗೆ ಚರ್ಚೆಗೆ ಅನುವು ಮಾಡಿಕೊಟ್ಟಿತು. 'ಆರಾಧನೆ ಸುಲಭ, ತಿಳಿಯುವುದು ಕಷ್ಟ' ಎಂದು ಶೆಟ್ಟರ್ ಅವರು ತಮ್ಮ ಚಿಂತನಾ ಲಹರಿಯನ್ನು ಹರಿಯಬಿಟ್ಟರು.

ಕೇಂದ್ರ ಮಾನವ ಸಂಪನ್ಮೂಲ ಮಂತ್ರಾಲಯವು ಶಾಸ್ತ್ರೀಯ ಭಾಷೆಗಳಲ್ಲಿ ವಿಶೇಷ ಕೊಡುಗೆ ನೀಡಿದ ವಿದ್ವಾಂಸರನ್ನು ಗುರುತಿಸಿ ರಾಷ್ಟ್ರಪತಿಗಳಿಂದ ಗೌರವ ಪ್ರಶಸ್ತಿಯನ್ನು ನೀಡುತ್ತಿದೆ. ಈ ಪ್ರಶಸ್ತಿಯನ್ನು ಸ್ವೀಕರಿಸಲು ಕನ್ನಡದ ಈ ನಾಲ್ವರು ಖ್ಯಾತ ವಿದ್ವಾಂಸರು ದೆಹಲಿಗೆ ಬಂದಿದ್ದರು.

ಈ ಸಂದರ್ಭದಲ್ಲಿ ಈ ನಾಲ್ವರು ವಿದ್ವಾಂಸರುಗಳಿಗೆ ಶಾಲು ಹೊದಿಸಿ, ಸ್ಮರಣಿಕೆ, ಫಲ, ಪುಷ್ಪಗಳಿಂದ ಗೌರವಿಸಲಾಯಿತು. ಆರಂಭದಲ್ಲಿ ಸಂಶೋಧಕರು ಮತ್ತು ಭಾಷಾ ತಜ್ಞರಾದ ಡಾ. ಎಂ. ಚಿದಾನಂದ ಮೂರ್ತಿ ಮತ್ತು ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿಯವರು ಕನ್ನಡ ಭಾಷೆಯ ಶ್ರೀಮಂತ ಪರಂಪರೆ ಮತ್ತು ಪ್ರಾಚೀನತೆಯ ಕುರಿತು ಮಾತನಾಡಿ ಕರ್ನಾಟಕವು ಭಾರತದ ಸಂಸ್ಕೃತಿ ಸಂಪನ್ನ ಪ್ರದೇಶವಾಗಿತ್ತು ಎಂದು ವಿವರಿಸಿದರು. ಅವ'ರು ದೆಹಲಿ ಕರ್ನಾಟಕ ಸಂಘದ ಅಭಿನಂದನೆಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ದೆಹಲಿಯಲ್ಲಿರುವ ಹಿರಿಯ ಸಾಹಿತಿಗಳಾದ ಡಾ. ಎಚ್.ಎಸ್. ಶಿವಪ್ರಕಾಶ್, ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಡಾ. ಟಿ.ಎಸ್. ಸತ್ಯನಾಥ್ ಅವರು ಮೂವರು ವಿದ್ವಾಂಸರ ಬದುಕು, ಬರಹ ಮತ್ತು ಕೊಡುಗೆಗಳನ್ನು ಸಭೆಗೆ ಪರಿಚಯಿಸಿದರು. ಯಾವುದೇ ಸ್ಥಾನಮಾನವನ್ನು ಬಯಸದೆ ಕನ್ನಡ ನಾಡು ನುಡಿಯ ಬೆಳವಣಿಗೆಗೆ ಹಿರಿಯ ವಿದ್ವಾಂಸರು ಕಾರಣರಾಗಿದ್ದಾರೆ ಎಂದು ಈ ಸಂದರ್ಭದಲ್ಲಿ ಸ್ಮರಿಸಿದರು. ಡಾ. ಚಿದಾನಂದ ಮೂರ್ತಿಯವರ ಶಿಷ್ಯರೂ ಆಗಿರುವ ಡಾ. ಟಿ.ಎಸ್. ಸತ್ಯನಾಥ್ ಅವರು ತಮ್ಮ ವಿದ್ಯಾರ್ಥಿ ದೆಸೆಯ ದಿನಗಳನ್ನು ಸ್ವಾರಸ್ಯಕರವಾಗಿ ನೆನೆದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮಾತನಾಡಿ ಇದೊಂದು ಸ್ಮರಣೀಯ ಮತ್ತು ಐತಿಹಾಸಿಕ ದಿನ ಎಂದು ಹರ್ಷ ವ್ಯಕ್ತಪಡಿಸಿದರು. ಈ ವಿಶೇಷ ಸಮಾರಂಭವನ್ನು ಯೋಗ್ಯರೀತಿಯಲ್ಲಿ ದಾಖಲಿಸಿ ಸಂಗ್ರಹಿಸಲಾಗುವುದು ಎಂದು ಅವರು ಹೇಳಿದರು.

ಶ್ರೀ ದಿನೇಶ್ ಶೆಣೈ ಅವರ ಮಾರ್ಗದರ್ಶನದಲ್ಲಿ ಈ ಸಮಾರಂಭವನ್ನು ವಿಶೇಷವಾಗಿ ಚಿತ್ರೀಕರಿಸಲಾಯಿತು ಮತ್ತು ಇದು ಯೂ ಟ್ಯೂಬ್‌ನಲ್ಲಿ ಸಾಹಿತ್ಯಾಸಕ್ತರಿಗೆ ಲಭ್ಯವಿದೆ. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

*ಡಾ. ಅವನೀಂದ್ರನಾಥ್ ರಾವ್*




**ಡಾ. ಟಿ.ಎಸ್. ಸತ್ಯನಾಥ್ ಅವರು ವಿದ್ವಾಂಸರ ಕುರಿತು ಮಾತನಾಡಿದರು**

# ದೆಹಲಿ ಪೋಲಿಸ್ ಕನ್ನಡಿಗರ ಸಮಿತಿಯ ಯುಗಾದಿ ಮಿಲನ



ದಿನಾಂಕ 07.04.2019ರ ಭಾನುವಾರದ ಮುಸ್ಸಂಜೆಯಲ್ಲಿ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವತಿಯಿಂದ ಯುಗಾದಿ ಸಾಂಸ್ಕೃತಿಕ ಮಿಲನ 2019 ಎಂಬ ರಮಣೀಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಶ್ರೀಮತಿ ವೀಣಾ ಕೊತ್ವಾಲೆ, ಜಂಟಿ ಕಾರ್ಯದರ್ಶಿಗಳು ಕಾನೂನು ಮಂತ್ರಾಲಯ ಕೇಂದ್ರ ಸರ್ಕಾರ ಆಗಮಿಸಿದ್ದರು ಮತ್ತು ಡಾ. ವೆಂಕಟಾಚಲ ಹೆಗಡೆ ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ ರವರು ಅಧ್ಯಕ್ಷತೆಯನ್ನು ವಹಿಸಿಕೊಂಡು ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಉದ್ದೇಶ ಹಾಗೂ ಕಾರ್ಯಗಳ ಬಗ್ಗೆ ಬಹಳ ವಿಸ್ತಾರವಾಗಿ ಪ್ರಶಂಶಿಸಿದರು ಮತ್ತು ದೆಹಲಿ ಪೋಲಿಸ್ ಕಲ್ಯಾಣ ಸಮಿತಿಯ ಹಿರಿಯರಾದ ಹಾಗೂ ಸಮಿತಿಯ ಪೂರ್ವ ಅಧ್ಯಕ್ಷರುಗಳಾದ ಶ್ರೀ ಸಿದ್ದಲಿಂಗಪ್ಪ ಮತ್ತು ಶ್ರೀ ವಿಜಯ್ ಕುಮಾರ್ ರವರುಗಳು ವೇದಿಕೆಯನ್ನು ಹಂಚಿಕೊಂಡಿದ್ದರು.

ಸಭಾಕಾರ್ಯಕ್ರಮದ ನಂತರ ಸಂಭಾಂಗಣದಲ್ಲಿ ನೆರೆದಿದ್ದ ಅಪಾರ ದೆಹಲಿ ಕನ್ನಡಿಗರಿಗೆ ಸಮಿತಿಯ ಕಾರ್ಯದರ್ಶಿಗಳಾದ ಮಹದೇವ್ ರವರ ನಿರೂಪಣೆ ಮುಖಾಂತರ ಸಮಿತಿಯ ಸ್ಥಳೀಯ ಪುಟಾಣಿಗಳು, ಮಕ್ಕಳು, ಮಹಿಳೆಯರು, ಮತ್ತು ಪುರುಷರು, ಅತ್ಯುತ್ತಮ ಪ್ರದರ್ಶನ ಮೆರೆದು ದೆಹಲಿ ಕನ್ನಡಿಗರಿಗೆ ಸಾಂಸ್ಕೃತಿಕ ರಸದೌತಣವನ್ನೇ ಅರ್ಪಿಸಿದರು.

ಈ ಭವ್ಯ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ದೆಹಲಿ ಕರ್ನಾಟಕ ಸಂಘದ ಸಮಸ್ತ ಪದಾಧಿಕಾರಿಗಳಿಗೆ ಹಾಗೂ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆ ಧನ್ಯವಾದಗಳು.

*ಎ.ಟಿ. ಶ್ರೀನಿವಾಸ್*











# ಡಾ. ಬಿ.ಆರ್. ಅಂಬೇಡ್ಕರ್ ವಿಚಾರಧಾರೆ ಅನುಸರಣೀಯ

**-ಡಾ. ವೆಂಕಟಾಚಲ ಹೆಗಡೆ**



ಡಾ. ಬಿ.ಆರ್ ಅಂಬೇಡ್ಕರ್ ಅವರ ಜೀವನ ಆದರ್ಶ ಹಾಗು ವಿಚಾರಧಾರೆಗಳು ಎಂದೆಂದಿಗೂ ಪ್ರಸ್ತುತವಾಗಿರುತ್ತದೆ. ಅವರ ಕೊಡುಗೆ ಅಪರಿಮಿತವಾದುದು. ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರಗಳನ್ನು ಯುವಜನತೆ ಅನುಸರಿಸಬೇಕು ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಕರೆ ನೀಡಿದರು.

ದೆಹಲಿ ಕರ್ನಾಟಕ ಸಂಘ ಹಾಗು ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ 128 ನೇ ಜನ್ಮ ದಿನಾಚರಣೆ ಹಾಗು ಸಾಂಸ್ಕೃತಿಕ ಸಂಜೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ವೆಂಕಟಾಚಲ ಹೆಗಡೆ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಎಕನಾಮಿಕ್ಸ್ ವಿಷಯದಲ್ಲಿ ಪಿ.ಹೆಚ್.ಡಿ. ಪದವಿ ಪಡೆದ ಮೊದಲ ಭಾರತೀಯರು. ಅನೇಕ ಬರಹ ಹಾಗೂ ಅವರು ಸಂಸತ್ತಿನಲ್ಲಿ ಮಾಡಿದ ಭಾಷಣ ಇಂದಿಗೂ ಪ್ರಸ್ತುತ, ಅಲ್ಲದೇ ವಿದೇಶಗಳಲ್ಲಿ ಪಠ್ಯಪುಸ್ತಕಗಳಾಗಿವೆ ಎಂದು ಬಣ್ಣಿಸಿದರು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದೇಶಕ್ಕೆ ದಿಕ್ಸೂಚಿಯಂತಹ ಸಂವಿಧಾನ ನೀಡಿ ಭದ್ರಬುನಾದಿಯನ್ನು ಹಾಕಿದ್ದಾರೆ. ಅಂಬೇಡ್ಕರ್ ಅವರ ಬದುಕು ಹಾಗು ಬರಹವನ್ನು ಯುವ ಜನತೆ ಅಧ್ಯಯನ ಮಾಡಬೇಕು ಎಂದರು.

ಮುಖ್ಯ ಅತಿಥಿ ಕರ್ನಾಟಕ ಸರ್ಕಾರದ ಆರ್ಥಿಕ ಹಾಗು ಸಾಂಖ್ಯಿಕ ಇಲಾಖೆಯ ಜಂಟಿ ನಿರ್ದೇಶಕ ಶ್ರೀ ಡಿ. ಚಂದ್ರಶೇಖರಯ್ಯ ಅವರು ಮಾತನಾಡುತ್ತಾ, ಜಗತ್ತಿನ 160 ರಾಷ್ಟ್ರಗಳಲ್ಲಿ ಏಕಕಾಲದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮದಿನಾಚರಣೆಯನ್ನು ಆಚರಿಸಲಾಗುತ್ತಿದೆ. ವಿಶ್ವದಾದ್ಯಂತ ಅಂಬೇಡ್ಕರ್ ಅವರ ಹೆಸರಿನಲ್ಲಿ ಸಂಘಸಂಸ್ಥೆಗಳಿವೆ. ಎಲ್ಲ ಸಮುದಾಯಗಳಿಗೆ ಅಪರಿಮಿತವಾದ ಕೊಡುಗೆ ನೀಡಿದ್ದಾರೆ. ಆದರೆ ಭಾರತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸುತ್ತಿರುವುದು ಶೋಚನೀಯ. ಅಂಬೇಡ್ಕರ್ ಅವರನ್ನು ವಸ್ತುನಿಷ್ಟವಾಗಿ ಅಧ್ಯಯನ ಮಾಡಿದರೆ ಇಂತಹ ಮನಸ್ಥಿತಿ ಬದಲಾಗುತ್ತದೆ ಎಂದು ತಿಳಿಸಿದರು.

ಡಾ. ಬಿ.ಆರ್ ಅಂಬೇಡ್ಕರ್ ಕುರಿತು ವಿಷಯ ಮಂಡಿಸಿದ ನವದೆಹಲಿಯ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಪ್ರಮೋದ ಕುಮಾರ್, ಅಂಬೇಡ್ಕರ್ ಅವರು ಸಂವಿಧಾನ ರಚನಾ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲೇ 220 ಕ್ಕೂ ಅಧಿಕ ಆಕ್ಷೇಪಣೆ ಹಾಗು ತಿದ್ದುಪಡಿಗಳನ್ನು ಮಾಡುವ ಮೂಲಕ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಸಂದಿಗ್ದ ಪರಿಸ್ಥಿತಿಗಳ ಮುನ್ಸೂಚನೆಯೊಂದಿಗೆ ಯುಕ್ತ ಶಾಸನಗಳನ್ನು ಅಳವಡಿಸಿದ್ದಾರೆ. ವಿಶ್ವ ಸಂಸ್ಥೆಯೇ ಅಂಬೇಡ್ಕರ್ ಅವರನ್ನು ಅಧ್ಯಯನ ಮಾಡಿ ಅವರ ಜನ್ಮದಿನಾಚರಣೆಯನ್ನು ಜ್ಞಾನ ದಿನಾಚರಣೆಯನ್ನಾಗಿ ಆಚರಿಸುತ್ತಿದೆ ಎಂದರು.

ದೆಹಲಿ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಶ್ರೀಮತಿ ಡಾ. ಅನು ಮೆಹ್ರಾ ಮಾತನಾಡುತ್ತಾ, ಅಂಬೇಡ್ಕರ್ ಅವರು ಮಹಿಳೆಯರು ಹಾಗು ಕಾರ್ಮಿಕರ ಏಳಿಗೆಗಾಗಿ ಕಾನೂನು ಸಚಿವರಾಗಿದ್ದ ಅವಧಿಯಲ್ಲಿ ಅನೇಕ ಕಾನೂನುಗಳನ್ನು ಜಾರಿಗೊಳಿಸಿದ್ದಾರೆ. ಎಲ್ಲ ಮಹಿಳೆಯರಿಗೆ ಅಂಬೇಡ್ಕರ್ ಅವರು ತಂದೆಯ ಸ್ವರೂಪದಲ್ಲಿದ್ದಾರೆ ಎಂದರು.

ದೆಹಲಿ ಬಿಎಸ್ಇಎಸ್ ನ ಡೆಪ್ಯುಟಿ ಜನರಲ್ ಮ್ಯಾನೇಜರ್ ಚಂದ್ರಸೇನ್ ಬೌದ್ಧ ಅವರು ಮಾತನಾಡಿದರು.





**ಡಾ. ಎಂ.ಎಸ್. ಶಶಿಕುಮಾರ ಹಾಗೂ ಡಾ. ರಂಗನಾಥ ಎಂ. ಸಿಂಗಾರಿ ಅವರಿಗೆ 'ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಸಾಮಾಜಿಕ ನ್ಯಾಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು.**

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಸ್ವಾಗತಿಸಿ, ಮುಂದಿನ ದಿನಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಇನ್ನಷ್ಟು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.

ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಅಧ್ಯಕ್ಷ ಶ್ರೀ ಬಿ.ಕೆ. ಬಸವರಾಜ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಈ ಕಾರ್ಯಕ್ರಮಕ್ಕೆ ಸಹಾಯ ಸಹಕಾರ ನೀಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಪದಾಧಿಕಾರಿಗಳನ್ನು, ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಕೃತಜ್ಞತೆ ಸಲ್ಲಿಸಿದರು.

ಡಾ. ಎಸ್.ಎಲ್. ಭಂಡಾರಕರ್ ನಿರೂಪಿಸಿದರು. ಡಾ.ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಕಾರ್ಯದರ್ಶಿ ಎಸ್. ಕುಮಾರ ವಂದಿಸಿದರು. ಅಮರೇಶ್ ಅವರು ಉಪಸ್ಥಿತರಿದ್ದರು.

ಡಾ. ಎಂ.ಎಸ್. ಶಶಿಕುಮಾರ ಹಾಗೂ ಡಾ. ರಂಗನಾಥ ಎಂ. ಸಿಂಗಾರಿ ಅವರಿಗೆ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಸಾಮಾಜಿಕ ನ್ಯಾಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕುಮಾರಿ ಪ್ರೇರಣಾ ರಾವ್ ಅವರು ಪ್ರಸ್ತುತಪಡಿಸಿದ ಕಥಕ್ ನೃತ್ಯ ಪ್ರೇಕ್ಷಕರ ಮನಮುಟ್ಟಿತು.

ಪುತ್ತೂರಿನ ಶ್ರೀದೇವಿ ನೃತ್ಯಾರಾಧನಾ ಕಲಾ ಕೇಂದ್ರದ ನೃತ್ಯ ಗುರುಗಳಾದ ಶ್ರೀಮತಿ ರೋಹಿಣಿ ಉದಯ್ ಹಾಗೂ ತಂಡದ ಕಲಾವಿದರು ಪ್ರಸ್ತುತಪಡಿಸಿದ ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯರೂಪಕ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸಿತು.




**ಶ್ರೀಮತಿ ರೋಹಿಣಿ ಉದಯ್**





**ಕುಮಾರಿ ಪ್ರೇರಣಾ ರಾವ್**

ಮೊದಲಿಗೆ ಗಣೇಶ ಸ್ತುತಿಯ ನೃತ್ಯದೊಂದಿಗೆ ಪ್ರಾರಂಭವಾಯಿತು. ಶ್ರಾವಣ ಬಂತು ಕಾಡಿಗೆ, ಬಂತು ನಾಡಿಗೆ ಮತ್ತು ವಂದೆ ಮಾತರಂ ಗೀತೆಗೆ ನೃತ್ಯ ಹಾಗೂ ಯೋಧರ ಕುರಿತಾದ ನೃತ್ಯ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಮಂಡ್ಯ ಜಿಲ್ಲೆಯ ಪಾಂಡವಪುರದ ಗಾನಸುಮಾ ಕೆ. ಪರಮೇಶ ಅವರು ಅಂಬೇಡ್ಕರ್ ಅವರ ಕುರಿತ ಗೀತೆಗಳನ್ನು ಹಾಡಿದರು.

***ಎಸ್. ಕುಮಾರ್***



**ಕೆ. ಪರಮೇಶ**




**ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 27.04.2019ರಂದು ನಡೆದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆಯಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದ ಪುತ್ತೂರಿನ ಶ್ರೀದೇವಿ ನೃತ್ಯಾರಾಧನಾ ಕಲಾ ಕೇಂದ್ರದ ಕಲಾವಿದರನ್ನು ಅಭಿನಂದಿಸಲಾಯಿತು**

# ಗುರುಗಾಂವ್ ಕನ್ನಡ ಸಂಘದಲ್ಲಿ ಯುಗಾದಿ ಸಾಂಸ್ಕೃತಿಕ ಮಿಲನ



ಇದು ಎನ್.ಸಿ.ಆರ್. ಕನ್ನಡಿಗರ ಸಮ್ಮಿಲನ. ಹಳತನ್ನು ಕಳಚಿ ಹೊಸ ಚಿಗುರು ಚಿಗುರಿ ಪರಿವರ್ತನೆಗೆ ಸಂಕೇತವಾಗುವ ಹಬ್ಬ ಯುಗಾದಿ. ಯುಗಾದಿ ಎಂದರೆ ಕೇವಲ ಪ್ರಕೃತಿ ಬದಲಾವಣೆ ಮಾತ್ರವಲ್ಲದೆ ಜೀವಿಗಳ ಬದುಕಿನ ಬದಲಾವಣೆಯ, ನಮ್ಮ ಕನ್ನಡಿಗರ ವರ್ಷದ ಬದುಕಿಗೆ ಮುನ್ನುಡಿ ಬರೆಯುವ ಹಬ್ಬ. ಈ ಹಬ್ಬವನ್ನು ಆಚರಿಸಲು ಗುರುಗಾಂವ್ ಮತ್ತು ದೆಹಲಿ ಕನ್ನಡಿಗರು ಒಂದೆಡೆ ಸೇರಿದರು. ಆ ಜಾಗವೆ ನಾರ್ಥ್ ಕ್ಯಾಪ್ ಯುನಿವರ್ಸಿಟಿ. ಕಾರ್ಯಕ್ರಮವನ್ನು ಕಂಚಿನ-ಕಂಠದ-ವ್ಯಾಖ್ಯಾನಕಾರರು ಎಂದು ಪ್ರೀತಿಯಿಂದ ಕರೆಯುವ ಗಜಾನನ ಶರ್ಮ ಅವರು ಸುಂದರವಾಗಿ, ಸರಳವಾಗಿ ಪ್ರತಿಯೊಂದು ಶಬ್ದವು ನಮ್ಮ ಕರ್ಣ ಪಟಲಗಳಿಗೆ ಮೃದುವಾಗಿ ತಾಕಿ, ಮೆದುಳಿನಲ್ಲಿ ಸಂಗ್ರಹವಾಗುವಂತೆ ಆರಂಭಿಸಿದರು.

ಶ್ರೀಮತಿ ಸುಮತಿ ಸಾಯಿಪ್ರಸಾದ್, ಶ್ರೀಮತಿ ದಿವ್ಯ ಚಂದ್ರಶೇಖರ್, ಶ್ರೀಮತಿ ಬೃಂದ ಸಂತೋಷ, ಶ್ರೀಮತಿ ವಿನಿತಾ ದಯಾನಂದ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತ್ತು.

ಮುಖ್ಯ ಅತಿಥಿ ಡಾ. ಎಸ್. ಎಂ. ಸಿದ್ದರಾಮೇಶ್ವರ ಕಂಟೀಕರ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ, ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಅಮೇಥಿ ಯುನಿವರ್ಸಿಟಿಯ ಶ್ರೀಧರ್, ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಸಾಯಿಪ್ರಸಾದ್ ಹೆರಂಜಾಲು, ಕಾರ್ಯದರ್ಶಿ ಕೃಷ್ಣಪ್ಪ, ಮಾಜಿ ಕಾರ್ಯದರ್ಶಿ ಸಿ. ಕುಮಾರ್ ದೀಪ ಬೆಳಗಿಸಿ ಚಾಲನೆ ನೀಡಿ ನಂತರ ಈಚೆಗೆ ಲಿಂಗೈಕ್ಯರಾದ ನಡೆದಾಡುವ ದೇವರು ಶಿವಕುಮಾರ್ ಸ್ವಾಮೀಜಿಗಳಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಗುರ್‌ಗಾಂವ್ ಕನ್ನಡ ಸಂಘದ ಮಾಜಿ ಅಧ್ಯಕ್ಷರುಗಳಾದ ಡಿ.ವಿ.ಎಸ್ ಮೂರ್ತಿ, ವಸಂತ್ ರಾವ್, ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಖಜಾಂಚಿ ಶ್ರೀಮತಿ ಅಶಾಲತಾ ಎಂ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಸಂತೋಷ ಜೆ., ಶಿವಪ್ಪ, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಮಾಜಿ ಸದಸ್ಯೆ ಶ್ರೀಮತಿ ಆಶಾ ಶ್ಯಾಮಸುಂದರ್ ಉಪಸ್ಥಿತರಿದ್ದರು.

ನಾರ್ಥ್ ಕ್ಯಾಪ್ ಕ್ಯಾಂಪಸ್ ಒಳಗೆ ಮುಂಭಾಗದಲ್ಲೇ ಗೋಚರಿಸಿ ನಮ್ಮನ್ನು ಆಶೀರ್ವದಿಸುವಂತೆ ಕಾಣುವ ಗಣೇಶ ದೇವರು ರಂಗೋಲಿ ರೂಪದಲ್ಲಿ ಎದ್ದು ಕಾಣುತ್ತಿದ್ದರು. ಶ್ರೀ ಗಣೇಶ ಚಿತ್ರವನ್ನು ರಂಗೋಲಿ ರೂಪದಲ್ಲಿ ಹಾಕಿದವರು ಶ್ರೀಮತಿ ಶ್ರೀಲಕ್ಷ್ಮೀ ಚಂದ್ರಶೇಖರ ಮತ್ತು ಶ್ರೀಮತಿ ನೇತ್ರ ಪ್ರಭುಸ್ವಾಮಿ ಇದು ಅಪಾರ ಮೆಚ್ಚುಗೆ ಗಳಿಸಿತ್ತು.

ಪಾಂಡವಪುರ, ಪಟ್ಟದ ಸೋಮನಹಳ್ಳಿ, ಗಾಯಕ ಪರಮೇಶ್ ಅವರು ಹಾಡಿದ ಚುಕ್ಕಿಯು ಮೂಡಿದೆ ಹಕ್ಕಿಯು ಹಾಡಿದೆ, ಮಹದೇಶ್ವರನ ಹಾಡು, ಚಲನಚಿತ್ರ ಗೀತೆ ಅರ್ಪಣೆ ನಿನಗೆ ಅರ್ಪಣೆ ಅತ್ಯದ್ಭುತ. ಶ್ರೀಮತಿ ವಿನಿತಾ ದಯಾನಂದ ಹಾಡಿದ ಶಿವನು ಭಿಕ್ಷಕ್ಕೆ ಬಂದ ಹಾಡು ಸುಮಧುರವಾಗಿತ್ತು. ಗುರುಗಾಂವ್ ನಗರದಿಂದ ಸ್ಥಳಾಂತರಗೊಂಡಿರುವ ಕುಮಾರ್ ಪರಿವಾರ ಶಾಲೆ ರಜೆಯ ಸಮಯದಲ್ಲಿ  ಗುರುಗಾಂವ್ ನಗರಕ್ಕೆ ಬಂದಿರುವ ಮಕ್ಕಳ ನೆನಪುಗಳು ಹೊಸ ಬಗೆಯದು.

ಮಿಲನ ಚಿತ್ರದ 'ನಿನ್ನಿಂದಲೆ' ಕುಮಾರ್ ಆದಿತ್ಯ ಚೆನ್ನಾಗಿ ಹಾಡಿದ್ದನು. ಗುರಗಾಂವ್ ನಗರದಲ್ಲಿ ಕನ್ನಡಿಗರೆಲ್ಲ ಒಂದೆ ಗೂಡಿನಲ್ಲಿ ಸೇರಿ ಕಳೆದ ಒಂದೂವರೆ ದಶಕಗಳಿಂದ ಆಚರಣೆ ಮಾಡಿಕೊಂಡು ಬರುತ್ತಿರುವ ಹಬ್ಬ ಯುಗಾದಿ, ಈ ವರ್ಷದ ಯುಗಾದಿ ಮಿಲನ ನಮ್ಮೆಲ್ಲರಿಗೂ ಆನಂದದ ರಸದೌತಣ. ನಾಲ್ಕೂರು ಕನ್ನಡಿಗರು ಒಂದೆಡೆ ಸೇರಿದರೆ ಆಗುವ ಖುಷಿ ಊರಿನ ಜಾತ್ರೆಯ ಸಂತೋಷಕ್ಕೆ ಸಮ.

ಪುಟಾಣಿ ಕೃಪಾ ರಮೇಶ್ ಅವರಿಂದ ಟಗರು ಸಿನಿಮಾದ ಹಾಡಿಗೆ ನೃತ್ಯ. ಬಾಲಕಿ ಶ್ರೀಯಾ ಚಂದ್ರ ಮತ್ತು ಬಾಲಕಿ ರಿಯಾ ಚಂದ್ರ ಅವರ ನೃತ್ಯವು ಬೆಳ್ಳಿ ಕಾಲುಂಗರ ಚಿತ್ರದಲ್ಲಿ ಮಾಲಾಶ್ರೀ ಅವರನ್ನು ನೆನಪಿಸಿತ್ತು.

ಬಾಲಕ ರಿಶ್ವಿನ್ ಹಾಡಿದ ಹಾಡು ಸೊಗಸಾಗಿತ್ತು. ಮಾಸ್ ಚಿತ್ರಗಳ ಹಾಡಿಗೆ ಕುಮಾರಿ ನವ್ಯ ಕೃಷ್ಣಪ್ಪ  ಮತ್ತು ತರುಣ್ ಕೃಷ್ಣಪ್ಪ ಮಾಡಿದ ಪಾಶ್ಚಾತ್ಯ ಶೈಲಿಯ ಕುಣಿತ, ದಾಖಲೆ ಬರೆದ ಕೆಜಿಎಫ್ ಚಿತ್ರದ ಹಾಡಿಗೆ ಕುಮಾರ ಪೃಥ್ವಿ ಕಟ್ಟೀಮನಿ, ಪ್ರೇಮಲೋಕ ಮತ್ತು ಕರ್ಣ ಚಿತ್ರಗಳ ಹಾಡುಗಳಿಗೆ ಬಾಲಕಿಯರ ಸಹನ ತಿಮ್ಮಪ್ಪ ಮತ್ತು ಕೀರ್ತನ ಕಟ್ಟೀಮನಿ ಮಾಡಿದ ನೃತ್ಯ ಅಮೋಘ. ಚಿವಾಡಿ ಪುಟಾಣಿಗಳು ಚಿಗುರಿದ ಕನಸು ಚಿತ್ರಕ್ಕೆ ಮುದ್ದು ಮುದ್ದಾಗಿ ನರ್ತಿಸಿದರು. ಶ್ರೀ ಚಿದಂಬರ ಕೋಟಿ ಅವರು ಯುಗಾದಿ ಪಂಚಾಗದ ವಿಷಯವನ್ನು ಎಲ್ಲರಿಗೂ ಅರ್ಥವಾಗುವಂತೆ ಸರಳವಾಗಿ



















ವಿವರಿಸುತ್ತಿರುವಾಗ, ಒಂದು ದಶಕದಿಂದ ಇದನ್ನು ಹೇಳುತ್ತಾ ಬಂದಿದ್ದಾ ವೆಂಕಟೇಶ ಆಚಾರ್ಯ ನೆನಪಾದರು.

ಮಾಸ್ಟರ್ ಘೋಷಿತ್ ಮತ್ತು ಮಾಸ್ಟರ್ ಹರ್ಷಿತ್ ಅವರ ದೇಶ ಭಕ್ತಿಯ ಹಾಡಿಗೆ ನೃತ್ಯ, ತನನಂ ತನನಂ ಚಿತ್ರಕ್ಕೆ ಕುಮಾರಿ ಸ್ವೌಮ್ಯ, ಪುಟಾಣಿ ಸಿಂಚನ ಮತ್ತು ಶೃತಿ ಮಾಡಿದ ನೃತ್ಯ ಅತಿ ಸುಂದರ.

ಗುರುಗಾಂವ್ ಕನ್ನಡ ಸಂಘದ ಶಾಸ್ತ್ರೀಯ ನೃತ್ಯ ಕಲಾವಿದೆ ಕು. ನವನೀಷ ಅವರಿಂದ ಅನೇಕ ಬಾಲಕಿಯರು ಶಾಸ್ತ್ರೀಯ ನೃತ್ಯವನ್ನು ಕಲಿತಿದ್ದರು. ಅವರ ಗೈರು ಹಾಜರು ಎದ್ದು ಕಾಣುತ್ತಿತ್ತು. ಅವರಿಂದ ಕಲಿತ ಕು. ಜೆ. ಸ್ನೇಹಾ ಚಂದ್ರಶೇಖರ ಮತ್ತು ಕು. ಖುಷಿ ಸಂತೋಷ ದಿನಂ ತನಾನ ಹಾಡಿಗೆ ಮಾಡಿದ ಕಥಕ್ ಶಾಸ್ತ್ರೀಯ ನೃತ್ಯ ಅಮೋಘವಾಗಿತ್ತು.

ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಸಾಯಿಪ್ರಸಾದ್ ಹೆರೆಂಜಾಲ್ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಗುರುಗಾಂವ್ ಕನ್ನಡ ಕಲಿಕಾ ಕೇಂದ್ರವನ್ನು ಆರಂಭಿಸಲು ಪ್ರೋತ್ಸಾಹಿಸಿ ಅದಕ್ಕೆ ಅಗತ್ಯ ಸಹಾಯ ಮಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮತ್ತು ಗುರುಗಾಂವ್ ಕನ್ನಡ ಸಂಘಕ್ಕೆ ನಿರಂತರ ಬೆಂಬಲಿಸಿ ಗುರುಗಾಂವ್ ಕನ್ನಡ ಕಲಿಕಾ ಕೇಂದ್ರಕ್ಕೆ ಆರ್ಥಿಕ ಸಹಾಯ ಮಾಡಿದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಮಾತನಾಡಿದರು.

ಮುಖ್ಯ ಅತಿಥಿ ಡಾ. ಎಸ್.ಎಂ. ಕಂಟೀಕರ್ ಅವರು 'ಈ ಬಾರಿ ನಾನು ಯುಗಾದಿ ಹಬ್ಬ ಆಚರಿಸಿಕೊಂಡಾಗ ಬೇವು ಬೆಲ್ಲ ಸಿಗಲಿಲ್ಲ ಆದರೆ ಇಲ್ಲಿ ನನಗೆ ಬೇವು





ಬೆಲ್ಲದ ಪೌಡರ್ ಸಿಕ್ಕಿದ್ದು ಬಹಳ ಸಂತೋಷ. ಬದುಕಿನಲ್ಲಿ ಸಿಹಿ-ಕಹಿ ಬೆರೆತಿರಲಿ. ಬೇವು ಬೆಲ್ಲ ಹಂಚುವುದು ಯುಗಾದಿ ಹಬ್ಬದ ಸಂಪ್ರದಾಯ. ಬೇವು ಬೆಲ್ಲವನ್ನು ಹಂಚಿದವರಿಗೆ ದೇವರು ಒಳ್ಳೆಯದನ್ನು ಮಾಡಲಿ' ಎಂದು ಹಾರೈಸಿದರು. ಶ್ರೀಮತಿ ನೇತ್ರ ಪ್ರಭುಸ್ವಾಮಿ ಅವರು ಬೇವು ಬೆಲ್ಲವನ್ನು ತಯಾರಿಸಿ ಹಂಚಿದ್ದರು.

ಸಾಬು ದರ್ಗಾ ಮತ್ತು ಗಜಾನನ ಶರ್ಮ ಮಾಡಿದ ಕಿರು ಹಾಸ್ಯ ಪ್ರಹಸನ 'ನಿಖಿಲ್ ಎಲ್ಲಿದ್ದಿಯಪ್ಪಾ' ಪ್ರೇಕ್ಷಕರನ್ನು ನಗುವಂತೆ ಮಾಡಿತ್ತು.

ಪುತ್ತೂರಿನಿಂದ ಬಂದ ಶ್ರೀದೇವಿ ಕಲಾ ಕೇಂದ್ರದ ಕಲಾವಿದರು ಮಾಡಿದ ಶಾಸ್ತ್ರೀಯ ನೃತ್ಯಗಳು ಅದ್ಭುತವಾಗಿ ಮೂಡಿ ಬಂದಿದ್ದವು. ದೇವರ ಸ್ತುತಿ, ವಂದೇ ಮಾತರಂ ಮತ್ತು ಶ್ರಾವಣ ಬಂತು ಹಾಡಿಗೆ ಮಾಡಿದ ನೃತ್ಯಗಳು ನಮ್ಮ ಮನಸೂರೆಗೊಂಡಿದ್ದವು.

ಇತ್ತೀಚಿಗಿನ ಗುರುಗಾಂವ್ ಕನ್ನಡ ಸಂಘ ಸಂಘದ ಮತ್ತೊಂದು ಯಶಸ್ವಿ ಯೋಜನೆ ದೆಹಲಿ ಕನ್ನಡ ಶಾಲೆ ಮತ್ತು ದೆಹಲಿ ಕರ್ನಾಟಕ ಸಂಘದ ಅನುದಾನದಲ್ಲಿ ನಡೆಸುವ ಕನ್ನಡ ಕಲಿಕಾ ಕೇಂದ್ರ. ಇಲ್ಲಿ ವಿಧ್ಯಾರ್ಥಿಗಳು ಕನ್ನಡವನ್ನು ಕಲಿತು ಅದರ ಸುವಾಸನೆಯನ್ನು ಪ್ರತಿಯೊಂದು ಕಾರ್ಯಕ್ರಮದಲ್ಲಿ ಪಸರಿಸುತ್ತಾರೆ. ಅದಕ್ಕೆ ಉದಾಹರಣೆ ಯುಗಾದಿ ಮಿಲನ ಉತ್ಸವದಲ್ಲಿ ಮಕ್ಕಳು ಹಾಡಿದ ಯುಗಾದಿ ಗೀತೆ.

ಯುಗಾದಿ ಮಿಲನದಲ್ಲಿ ಇದೇ ಮೊದಲ ಬಾರಿಗೆ ಗುರುಗಾಂವ್ ಬಾಲಕಿಯರು ಸಂಪ್ರದಾಯಕ ಉಡುಪುಗಳಲ್ಲಿ ಸುಂದರವಾಗಿ ಕಾಣುತ್ತಿದ್ದರು. ಈ ಹರ್ಷದ ಕ್ಷಣಗಳಿಗೆ ವೇದಿಕೆಯಾದ ನಾರ್ಥ್ ಕ್ಯಾಪ್ ಯುನಿವರ್ಸಿಟಿ ಪ್ರಾಂಗಣ ದೇಶದ ಎರಡನೇ ಅತ್ಯಂತ ಸ್ವಚ್ಛವಾದ ಯುನಿವರ್ಸಿಟಿ ಎಂದು ಪ್ರಶಸ್ತಿ ಪಡೆದಿದೆ. ಈ ಪ್ರಾಂಗಣ ಸಿಗಲು ನೆರವಾದವರು ನಾರ್ಥ ಕ್ಯಾಪ್ ಯುನಿವರ್ಸಿಟಿ ಉಪ ಕುಲಪತಿ ಶ್ರೀ ರಾಘವೇಂದ್ರ ಅವರಿಗೆ ಕೃತಜ್ಞತೆ ಸಲ್ಲಬೇಕು. ಆ ವೇದಿಕೆ ಮತ್ತು ಕಾರ್ಯಕ್ರಮಗಳಿಗೆ ರೂಪುರೇಷೆ ಹಾಕಿ ನಿರಂತರ ಭೇಟಿಗಳನ್ನು ಮಾಡಿ ಒಳ್ಳೆಯ ಕಾರ್ಯಕ್ರಮ ಸಿಗುವಂತೆ ಮಾಡಿದ ದೆಹಲಿ ಕರ್ನಾಟಕ ಸಂಘದ ಗುರುಗಾಂವ್ ಸದಸ್ಯ ಸಂತೋಷ. ಜೆ. ಮತ್ತು ಗುರ್‌ಗಾಂವ್ ಕನ್ನಡ ಸಂಘದ ಎಲ್ಲ ಪದಾಧಿಕಾರಿಗಳಿಗೆ ಧನ್ಯವಾದಗಳು ಸಲ್ಲಬೇಕು. ಕಾರ್ಯಕ್ರಮವನ್ನು ಸೊಗಸಾಗಿ ನಡೆಸಿದ ಗಜಾನನ ಶರ್ಮ ಮತ್ತು ಸಂಘಟಿಸಿದ ಅಧ್ಯಕ್ಷ, ಸಾಯಿ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಎಂ. ಕೃಷ್ಣಪ್ಪ, ಖಜಾಂಚಿ ಮರಿಬಸಪ್ಪ ಅಭಿನಂದನಾರ್ಹರು.

***ಚಂದ್ರಶೇಖರ ಜೋಳದರಾಶಿ***

# ಕುಮಾರಿ ಮೇಘ ಕಿಣಿ ಅವರಿಂದ ಮನಮೋಹಕ ರಂಗಪ್ರವೇಶ

ಬಹಳ ವರ್ಷಗಳಿಂದ ಗುರುಗ್ರಾಮದಲ್ಲಿ ನೆಲಸಿರುವ ಶ್ರೀ ಮಂಜುನಾಥ ಕಿಣಿ ಮತ್ತು ಲಕ್ಷ್ಮೀ ಕಿಣಿ ಅವರ ಮಗಳು ಕುಮಾರಿ ಮೇಘ ಅವರ ಭರತನಾಟ್ಯಂ ರಂಗಪ್ರವೇಶ (ಅರಂಗೇಟ್ರಂ) ಎಪ್ರಿಲ್ ತಿಂಗಳ 27ರಂದು ದೆಹಲಿಯ ತ್ರಿವೇಣಿ ಅಡಿಟೋರಿಯಂನಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಮೇಘಾ ಅವರು ಗುರು ಪ್ರಿಯಾ ವೆಂಕಟರಾಮನ್ ಪ್ರಸಿದ್ಧ ಭರತನಾಟ್ಯ ಕಲಾವಿದೆ. ತಮ್ಮ ನಾಟ್ಯ ಸಂಸ್ಥೆ ಕಲಾಕೃತಿ ಫೌಂಡೇಶನ್ ಮೂಲಕ ಅವರು ಈಗಾಗಲೇ ಜಗತ್ತಿನ ಹಲವು ಕಡೆಗಳಲ್ಲಿ ಭರತನಾಟ್ಯ ಪ್ರದರ್ಶನ ನೀಡಿದ್ದಾರೆ. ಮೇಘಾಳು ತನ್ನ ಐದನೆಯ ವಯಸ್ಸಿನಲ್ಲಿಯೇ ನಾಟ್ಯ ಕಲಿಯಲು ಆರಂಭಿಸಿ, ಮುಂದೆ ತನ್ನ 12ನೇ ವಯಸ್ಸಿನಲ್ಲಿ ಗುರು ಪ್ರಿಯಾ ಅವರ ಮಾರ್ಗದರ್ಶನದಲ್ಲಿ ಅದನ್ನು ಸಶಕ್ತವಾಗಿ ಮುಂದುವರೆಸಿದಳು. ಬಹಳ ಬೇಗನೆ ನೃತ್ಯದ ಸೂಕ್ಷ್ಮಗಳನ್ನು ಕಲಿತಕೊಂಡ ಆಕೆಯು ದೆಹಲಿಯ ಮತ್ತು ಗುರುಗ್ರಾಮದ ವಿವಿಧೆಡೆಗಳಲ್ಲಿ ಆಗಲೇ ನೃತ್ಯಕಾರ್ಯಕ್ರಮದಲ್ಲಿ ಭಾಗವಹಿಸಿ ಅನುಭವ ಪಡೆದಿದಳು. ದೆಹಲಿ ವಿವಿಗೆ ಸೇರಿದ ಕಮಲಾ ನೆಹರೂ ಕಾಲೇಜಿನಲ್ಲಿ ಎರಡನೇ ವರ್ಷದ ಬಿ.ಎ. ಓದುತ್ತಿರುವ ಆಕೆಯ ಹವ್ಯಾಸಗಳು ಹಲವಾರು. ಈಗಾಗಲೇ ಆಕೆ ಹಿಂದೂಸ್ಥಾನೀ ಹಾಡುಗಾರಿಕೆಯಲ್ಲಿ ಪರಿಣಿತೆ. ಹಾರ್ಮೋನಿಯಂ, ಗಿಟಾರ್ ಮತ್ತು ಸಿತಾರ್ ನುಡಿಸುವುದನ್ನೂ ಆಕೆ ಕಲಿತಿದ್ದಾಳೆ.

ತ್ರಿವೇಣಿಯಲ್ಲಿ ನಡೆದ ಈ ಬಹುಮುಖ ಪ್ರತಿಭೆಯ ಮೇಘಾಳ ಅರಂಗೇಟ್ರಂ ಯಶಸ್ವಿಯಾದದ್ದಲ್ಲದೆ, ಪ್ರೇಕ್ಷಕರಿಗೆ ಹೊಚ್ಚ ಹೊಸ ಅನುಭವ ನೀಡುವಲ್ಲಿ ಅತ್ಯಂತ ಯಶಸ್ವಿಯಾಯಿತು. ಆ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಂಸಿನಿಯ ನಿರ್ದೇಶಕರಾದ ಪ್ರಖ್ಯಾತ ಭರತನಾಟ್ಯಂ ಕಲಾವಿದ ಡಾ. ಶ್ರೀಧರ್ ವಾಸುದೇವ ಅವರು ಹೇಳಿದಂತೆ–'ಈ ಅರಂಗೇಟ್ರಂನಲ್ಲಿ ಎಲ್ಲವೂ ಉತ್ಕೃಷ್ಟವಾಗಿ ನಡೆದಿದೆ, ಮೇಘಾಳ ನೃತ್ಯ, ಅವಳ ಮೇಕಪ್, ಹಿಮ್ಮೇಳದವರ ಸಂಗೀತ, ಧ್ವನಿವರ್ಧಕ, ರಂಗಭೂಮಿಯ ಸರಳ ಸುಂದರ ಶೃಂಗಾರ' ಎಲ್ಲವೂ ಎಣಿಸಿದಂತೆಯೇ ನಡೆದಿದೆ'. ದೆಹಲಿಯಲ್ಲಿ ಹೀಗಾಗುವುದು ಬಹಳ ಅಪರೂಪ ಎಂದು ಹೇಳಲೂ ಅವರು ಮರೆಯಲಿಲ್ಲ.



ಕಾರ್ಯಕ್ರಮವು ಗಣಪತಿ ವಂದನೆಯಿಂದ ಸಾಂಪ್ರದಾಯಿಕವಾಗಿ ಆರಂಭವಾಯಿತು. ಮುಂದೆ ಮೇಘಾಳು ಹಸನ್ಮುಖದಿಂದಲೇ ಪುಷ್ಪಾಂಜಲಿ (ನಟರಾಜ, ನೃತ್ಯಗುರು, ಹಿಮ್ಮೇಳ ಕಲಾವಿದರು ಮತ್ತು ಪ್ರೇಕ್ಷಕರಿಗೆ ಸಲ್ಲಿಸುವ ನಮನ), ಅಲರಿಪು (ಸರಳ ಅಕ್ಷರಗಳ ಉಚ್ಚಾರದ ಮೂಲಕ ಮಾಡುವ ತಾಳದ ಒಂದು ಪ್ರಸ್ತುತಿ, ಪ್ರದರ್ಶನದ ಯಶಸ್ಸಿಗೆ ದೇವರ ಆಶೀರ್ವಾದವನ್ನು ಬೇಡುವ ವಿಧಾನವೂ ಹೌದು), ಜತಿಸ್ವರಂ (ಮೃದಂಗದ ತಾಳಕ್ಕೆ ಸರಿಯಾಗಿ ಪದಚಲನೆ ಮತ್ತು ದೇಹಚಲನೆ ಮಾಡುವ ಪ್ರತಿಭೆ), ವರ್ಣಂ (ಸಂಕೀರ್ಣ ಮತ್ತು ಕ್ಲಿಷ್ಟ ಚಲನೆಗಳ ದೀರ್ಘ ನೃತ್ಯ) ಮತ್ತು ತಿಲ್ಲಾನ (ಶುದ್ಧ ನೃತ್ಯದ ಭಾಗ, ನೃತ್ಯದ ಎಲ್ಲಾ ಅಂಶಗಳನ್ನೂ ಪ್ರದರ್ಶಿಸುವ ಪ್ರತಿಭೆ) ಗಳನ್ನು ಯಾವುದೇ ಸಂಕೋಚವಿಲ್ಲದೆ ನುರಿತ ಕಲಾವಿದರಂತೆ ಪ್ರದರ್ಶಿಸಿದಳು. ಕಣ್ಣು ಮತ್ತು ಕೈಗಳ ಪರಿಣಾಮಕಾರೀ ಹೊಂದಾಣಿಕೆ ಮತ್ತು ಸಮಬಳಕೆಯಲ್ಲಿ ಆಕೆ ವಿಶೇಷ ಹಿಡಿತವನ್ನು ಸಾಧಿಸಿದ್ದಾಳೆ. ಪುರಂದರದಾಸರ ಆಡಿದಳು ಯಶೋಧೆ ಕೀರ್ತನೆಗೆ ಆಕೆ ನರ್ತನದ ಜೊತೆ ಪ್ರಕಟಿಸಿದ ಭಾವವೂ ಆಕರ್ಷಕವಾಗಿತ್ತು. ದೇಹವನ್ನು ಭಾವಕ್ಕೆ ಒಗ್ಗಿಸುವ ಪರಿ ಆಕೆಗೆ ಕರಗತವಾಗಿದೆ. ಕೃತಿಯಿಂದ ಕೃತಿಗೆ ಭಿನ್ನತೆಯನ್ನು ತೋರಿಸುವಲ್ಲಿಯೂ ಆಕೆ ಸಫಲಳಾದಳು.



ಕಲಾವಿದೆ ಕು. ಮೇಘ ಕಿಣಿ ಮತ್ತು ಡಾ. ಪುರುಷೋತ್ತಮ ಬಿಳಿಮಲೆ

ನಾನು ಕಳೆದ ಸುಮರು 10 ವರ್ಷಗಳಲ್ಲಿ ನೋಡಿದ ಅತ್ಯುತ್ತಮ ಅರಂಗೇಟ್ರಂ ಕುಮಾರಿ ಮೇಘಾಳದ್ದು. ಅವಳಿಗೆ ಈ ಕ್ಷೇತ್ರದಲ್ಲಿ ಎಲ್ಲ ಬಗೆಯ ಯಶಸ್ಸೂ ದೊರಕಲಿ ಎಂದು ಆಶಿಸುತ್ತೇನೆ. ಈ ಪ್ರತಿಭೆಯನ್ನು ಸದಾ ಪೋಷಿಸುತ್ತಲೇ ಬರುತ್ತಿರುವ ಅವಳ ತಂದೆ ಶ್ರೀ ಮಂಜುನಾಥ್ ಕಿಣಿ ಮತ್ತು ತಾಯಿ ಲಕ್ಷ್ಮೀ ಕಿಣಿ ಅವರಿಗೂ ಅಭಿನಂದನೆಗಳು

*ಡಾ. ಪುರುಷೋತ್ತಮ ಬಿಳಿಮಲೆ*

# ಭಿವಾಡಿ ಕನ್ನಡ ಬಳಗದಿಂದ 'ಯುಗಾದಿ ಸಂಭ್ರಮ'




ಹರಿಯಾಣಾ ರಾಜ್ಯದ 'ಭಿವಾಡಿ' ಕನ್ನಡಿಗರ ಬಳಗದ ಮೂಲಕ ಮೊದಲ ಬಾರಿಗೆ 'ಯುಗಾದಿ ಸಂಭ್ರಮ' ಕಾರ್ಯಕ್ರಮವನ್ನು ದಿನಾಂಕ 07.04.2019ರಂದು ಅದ್ದೂರಿಯಾಗಿ ಆಚರಿಸಲಾಯಿತು. ಕಳೆದ ಎರಡು ವರ್ಷಗಳಿಂದ ಭಿವಾಡಿ ಕನ್ನಡ ಬಳಗವು ವಿವಿಧ ಕನ್ನಡದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಚರಿಸುತ್ತಾ ಬರುತ್ತಿದ್ದಾರೆ.

ಭಿವಾಡಿಯ ಟಾಡಾ ಗ್ರಾಮದ ಟ್ರೆಹಾನ್, ಹಿಲ್ ವ್ಯೂ ಗಾರ್ಡನ್‌ನ ಎನರ್ಜಿ ಕ್ಲಬ್ ಸಭಾಗ್ರಹದಲ್ಲಿ ನಡೆದ 'ಸಾಂಸ್ಕೃತಿಕ ಉತ್ಸವ'ದಲ್ಲಿ ಭಿವಾಡಿಯ ನೂರಾರು ಕನ್ನಡಿಗರೊಂದಿಗೆ ಗುರುಗ್ರಾಮ ಹಾಗೂ ದೆಹಲಿಯಿಂದ ಆಗಮಿಸಿದ್ದ ಕನ್ನಡಾಭಿಮಾನಿ ಗಣ್ಯರು ಯುಗಾದಿ ಸಂಭ್ರಮದಲ್ಲಿ ಪಾಲೊಂಡಿದ್ದರು.

ಯುಗಾದಿ ಸಂಭ್ರಮದ ಸಂದರ್ಭ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನೃತ್ಯ, ಜಾನಪದ ಗೀತೆಗಳು, ಜಾನಪದ ಫ್ಯಾಷನ್ ಶೋ, ಹಿರಿಯರನ್ನೂ ಮಕ್ಕಳಾಗಿಸಿದ ಅಪರೂಪದ ಸ್ಪರ್ಧೆಗಳಾದ 'ಸೂಪರ್ ಮಿನಿಟ್' ಹಾಗೂ 'ಆದರ್ಶ ದಂಪತಿಗಳು' ನೋಡುಗರ ಗಮನಸೆಳೆದವು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ವಾರ್ತಾ ಕೇಂದ್ರದ ಉಪನಿರ್ದೇಶಕ ಡಾ. ಮೈಸೂರು ಗಿರೀಶ್, ಗುರುಗ್ರಾಮ ಕನ್ನಡ ಸಂಘದ ಮಾಜಿ ಅಧ್ಯಕ್ಷ ಶ್ರೀನಿವಾಸ ಮೂರ್ತಿ, ಫರೀದಾಬಾದ್‌ನ ಭಂದ್ವಾರಿ ಗ್ರಾಮದ ರವಿಕಾಲ್ರಾ ಅವರ 'ಗುರುಕುಲ'ದ ಹಿರಿಯ ಕನ್ನಡಿಗ ರಾಜಣ್ಣ ಅವರುಗಳು ಭಾಗವಹಿಸಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು.

ಭಿವಾಡಿ ಕನ್ನಡ ಸಂಘವು ಕಳೆದ ಎರಡು ವರ್ಷಗಳಿಂದ ವಿವಿಧ ಕಾರ್ಯಕ್ರಮಗಳನ್ನು ಆಚರಿಸುತ್ತಾ ಬರುತ್ತಿದೆ. ಶ್ರೀ ಸತ್ಯನಾರಾಯಣ ಪೂಜೆ, ಕರ್ನಾಟಕ ರಾಜ್ಯೋತ್ಸವ, ಸಂಕ್ರಾಂತಿ ಸುಗ್ಗಿ, ಜನಪದ ಸಂಭ್ರಮ, ಗಣೇಶೋತ್ಸವ ಹಾಗೂ ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಕಳೆದ ಆರೇಳು ವರ್ಷಗಳ ಹಿಂದೆ ಭಿವಾಡಿಗೆ ಹೋಂಡಾ ಕಂಪನಿಯಲ್ಲಿ ಕೆಲಸ ನಿರ್ವಹಿಸುವ ಸುಮಾರು 30 ಕನ್ನಡದ ಕುಟುಂಬಗಳು ಭಿವಾಡಿಯಲ್ಲಿ ನೆಲಸಿದರು. ವಿವಿಧ ವೃತ್ತಿಗಳಲ್ಲಿರುವ ಹಾಗೂ ಬೇರೆ ಬೇರೆ ಪ್ರದೇಶದಲ್ಲಿ ನೆಲಸಿದ್ದ ಕನ್ನಡಿಗರು ಭಿವಾಡಿ ಕನ್ನಡಿಗರ ಬಳಗದಲ್ಲಿ ಒಟ್ಟುಗೂಡಲು ಪ್ರಾರಂಭಿಸಿದರು.

ಪ್ರಾರಂಭದಲ್ಲಿ ಗುರುಗ್ರಾಮ-ದೆಹಲಿಯಲ್ಲಿ ನಡೆಯುತ್ತಿದ್ದ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ವರ್ಷಕ್ಕೊಮ್ಮೆ ಒಂದು ಕಡೆ ಒಟ್ಟಾಗುತ್ತಿದ್ದ ಕುಟುಂಬಗಳು, ನಂತರದಲ್ಲಿ ಭಿವಾಡಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸುತ್ತಾ, ಕ್ರಮೇಣ ಹತ್ತು ಹಲವಾರು ಕನ್ನಡದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಚರಿಸಲಾಗುತ್ತಿದೆ.

ಭಿವಾಡಿ ಕನ್ನಡಿಗರ ಬಳಗದ ಬೆಳವಣಿಗೆಯಲ್ಲಿ ಗೋಪಾಲಕೃಷ್ಣ ಭಟ್, ನಾಗೇಶ ಜಿ.ಕೆ., ಡಾ. ಮುರಳೀಧರ ಭಟ್, ಈಶ್ವರಲಿಂಗ ಅರೇರ, ರವಿ ಜಿ.ಎಚ್., ಗಂಗಾಧರಯ್ಯ, ನವೀನ ಜೆ.ಎಚ್., ಸುಧಾಕರ ಶೆಟ್ಟಿ, ಪ್ರಭು ಪಾಟೀಲ, ಸಿದ್ದೇಶ್ವರ ಸಾಹುಕಾರ, ಶಶಿಧರ ಅನಿಲ್ ಪಾಟೀಲ, ವೀಣಾ ದೇಸಾಯಿ ದಂಪತಿ, ಬದರಿನಾಥ ಮಾನಕರಿ, ಪದ್ಮನಾಭ ಅಡಿಗರು ಸೇರಿದಂತೆ ಅನೇಕ ಉತ್ಸಾಹಿ ಯುವಕರ ಪಾತ್ರ ಅನನ್ಯ.




***ಗೋಪಾಲಕೃಷ್ಣ ಭಟ್***

# ಗುರುಗಾಂವ್‌ನಲ್ಲಿ 'ಚಿಣ್ಣರ ಕನ್ನಡ ಕಲರವ'



ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕ ಹಾಗೂ ಗುರುಗಾಂವ್ ಕನ್ನಡ ಕಲಿಕಾ ಕೇಂದ್ರ, ಗುರುಗಾಂವ್ ಇವರ ಸಹಯೋಗದೊಂದಿಗೆ ಮಕ್ಕಳಿಗಾಗಿ 'ಚಿಣ್ಣರ ಕನ್ನಡ ಕಲರವ' ಕಾರ್ಯಕ್ರಮವನ್ನು ದಿನಾಂಕ 14.04.2019ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮವು ದೀಪ ಬೆಳಗಿಸುವುದರ ಮೂಲಕ ಪ್ರಾರಂಭಗೊಂಡಿತು. ಅತಿಥಿಗಳು ಹಾಗೂ ಮಕ್ಕಳು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಗುರುಗಾಂವ್ ಕನ್ನಡ ಕಲಿಕಾ ಕೇಂದ್ರದ ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ನಾಡಗೀತೆಯನ್ನು ಪ್ರಸ್ತುತಪಡಿಸಿದರು.

ಮುಖ್ಯ ಅತಿಥಿ ಗುರುಗಾಂವ್ ಕನ್ನಡ ಸಂಘದ ಮಾಜಿ ಅಧ್ಯಕ್ಷ ಯು.ಎ. ವಸಂತರಾವ್ ಅವರು ಮಾತನಾಡಿ ಕನ್ನಡ ಕಲಿಕಾ ಕೇಂದ್ರದ ಮೂಲಕ ಮಕ್ಕಳು ಕನ್ನಡ ಕಲಿತು, ವಿವಿಧ ಕನ್ನಡ ಚಟುವಟಿಕೆಗಳಲ್ಲಿ ಭಾಗವಹಿಸಿದ್ದು ಶ್ಲಾಘನೀಯ ಎಂದರು. ಮಕ್ಕಳ ಸಾಹಿತ್ಯ ಪರಿಷತ್ತಿನ ಕುರಿತು ಮೆಚ್ಚುಗೆಯ ಮಾತನಾಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಸಾಯಿಪ್ರಸಾದ ಎಚ್. ಅವರು ಕಲಿಕೆ ನಿರಂತರವಾದದ್ದು, ಶಿಕ್ಷಣ ಪ್ರವಹಿಸುವ ಜಲ. ಕನ್ನಡದ ಬಗೆಗಿನ ಮಕ್ಕಳ ಒಲವು ಈ ಕಾರ್ಯಕ್ರಮದ ಮೂಲಕ ವೇದ್ಯವಾಯಿತು. ಹೊರನಾಡಿನಲ್ಲಿದ್ದುಕೊಂಡು ಮಕ್ಕಳಲ್ಲಿ ಕನ್ನಡ ಭಾಷೆ, ಸಂಸ್ಕೃತಿಯನ್ನು ಪರಿಚಯಿಸಿಕೊಡುವ ನಿಟ್ಟಿನಲ್ಲಿ ದೆಹಲಿ ಘಟಕದ ಮಕ್ಕಳ ಸಾಹಿತ್ಯ ಪರಿಷತ್ತಿನ ಶ್ರಮ ಮೆಚ್ಚುವಂತದ್ದಾಗಿದೆ ಎಂದರು. ಗುರುಗಾಂವ್ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಕೃಷ್ಣಪ್ಪ, ಗುರುಗಾಂವ್ ಕನ್ನಡ ಸಂಘದ ಖಜಾಂಚಿ ಮರಿಬಸಪ್ಪ ಎಂ. ಹಾಗೂ ದೆಹಲಿ ಘಟಕದ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅರವಿಂದ ಬಿಜ್ಜೆ, ಪ್ರಧಾನ ಕಾರ್ಯದರ್ಶಿ ಗಣೇಶ ಹೆಗಡೆ, ಖಜಾಂಚಿ ಅಮರೇಶ, ಪರಿಷತ್ತಿನ ಸಂಚಾಲಕ ಶ್ರೀಮತಿ ಮಾಲಿನಿ ಪ್ರಹ್ಲಾದ್, ಕೃಷ್ಣರಾಜ್ ಕೆ.ಎನ್. ಹಾಗೂ ಕೇಂದ್ರ ಘಟಕದ ಸದಸ್ಯ ಅರುಣ್, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸವಿತಾ ನೆಲ್ಲಿ ಗುರುಗಾಂವ್ ಕನ್ನಡ ಸಂಘದ ಪದಾಧಿಕಾರಿಗಳು ಹಾಗೂ ಗುರಗಾಂವ್ ಕನ್ನಡಿಗರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಗಿಡ-ಮರಗಳ ಹೆಸರು ಹೇಳುವುದು, ಕನ್ನಡದ ಕುರಿತಾಗಿ ರಸಪ್ರಶ್ನೆ, ಕರ್ನಾಟಕದ ಮಹಿಳಾ ಸಾಧಕರ ಭಾವಚಿತ್ರ ಗುರುತಿಸುವುದು, ಕಾಗುಣಿತ ಬರೆಯುವುದು, ಆಶುಭಾಷಣ, ಮುಂತಾದ ಮಕ್ಕಳ ಸೃಜನಶೀಲತೆಗೆ ಪೂರಕವಾದ ಸ್ಪರ್ಧಾ ಚಟುವಟಿಕೆಗಳು ನಡೆದವು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ಹಾಗೂ ಬಹುಮಾನ ವಿತರಿಸಲಾಯಿತು.

ಕು। ನವ್ಯ ಕೆ. ಇವರು ಹೇಳಿದ ಕನ್ನಡದ ಒಗಟುಗಳನ್ನು ಮಕ್ಕಳು ಬಿಡಿಸಿದರು. ಕನ್ನಡ ಭಾಷೆಯ ಮಹತ್ವದ ಕುರಿತು ಕು। ಸೂರಜ್, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಕುರಿತು ಕು। ಪ್ರಮೋದ್, ಗುರುಗಾಂವ್ ಕನ್ನಡ ಕಲಿಕಾ ಕೇಂದ್ರದ ಕುರಿತು ಕು। ಸಂತೋಷ್ ಮತ್ತು ಕು। ಸಂಜಯ್, ಕನ್ನಡ ಭಾಷೆಯ ಬೆಳಸುವಲ್ಲಿ ನನ್ನ ಪಾತ್ರ ವಿಚಾರದ ಕುರಿತು ಕು। ಪೃಥ್ವಿರಾಜ್. ಕೆ, ನನ್ನ ಆಸೆ ನನ್ನ ಭಾಷೆ ಕನ್ನಡ ಕುರಿತು ಕು। ಭರತ್ ಕುಮಾರ್, ಕು। ಆದಿತ್ಯ ಹಾಗೂ ಕು। ಅಭಿರಾಮ್ ವಿಚಾರಧಾರೆಯನ್ನು ಹಂಚಿಕೊಂಡರು. ಕು। ಸೌಮ್ಯಶ್ರೀ ಆರ್., ಕು। ಸ್ನೇಹಾ ಜೆ. ಹಾಗೂ ಕು। ಶೃತಿ ಪಿ. ಇವರು ಕನ್ನಡ ಸ್ವರಚಿತ ಕವನ ವಾಚಿಸಿದರು. ಕು। ಪಾರ್ವತಿ ಎಸ್. ಅವರು ಕಾರ್ಯಕ್ರಮ ಕುರಿತು ಅನಿಸಿಕೆ ಹೇಳಿದರು.

ಈ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಮಕ್ಕಳೇ ನಡೆಸಿಕೊಟ್ಟದ್ದು ವಿಶೇಷವಾಗಿತ್ತು ಹಾಗೂ ಮಕ್ಕಳಿಗಾಗಿಯೇ ಹಮ್ಮಿಕೊಂಡ ಈ ಕಾರ್ಯಕ್ರಮವನ್ನು ಸಭಿಕರೆಲ್ಲರೂ ಕೊಂಡಾಡಿದರು.

ಕು। ಸಂಚಿತಾ, ಕು। ರಿಯಾ ಚಂದ್ರ, ಕು। ಸ್ನೇಹಾ, ಕು। ಸುಹನಾ, ಕು। ಕೀರ್ತನಾ ಅವರು ಆಶಯ ಗೀತೆ ಪ್ರಸ್ತುತಪಡಿಸಿದರು. ಕು। ಮಹೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕು। ಸುಷ್ಮಾ ನಿಂಬಾಳ ಅವರು ಸ್ವಾಗತಿಸಿದರು. ಕು। ಖುಷಿ ಹಾಗೂ ರಿಶ್ವಿನ್ ನಿರೂಪಿಸಿದರು. ಕು। ಸುಮೇಧ ವಂದಿಸಿದರು. ಕು। ಅಭಿಷೇಕ ಉಬಾಳೆ ಪ್ರಮಾಣಪತ್ರ ವಿತರಣೆಯ ಕಾರ್ಯಕ್ರಮವನ್ನು ನಿರ್ವಹಿಸಿಕೊಟ್ಟರು. ಕಲಿಕಾ ಕೇಂದ್ರದ ಕನ್ನಡ ಶಿಕ್ಷಕಿಯರಾದ ಶ್ರೀಮತಿ ಸುಜಾತ ನಿಂಬಾಳ ಮತ್ತು ಶ್ರೀಮತಿ ಮಾಲಾ ರಮೇಶ್ ಅವರು ಸಹಕರಿಸಿದರು.

***ಗಣೇಶ ಹೆಗಡೆ***

# ಕ್ರೀಡಾ ಸಾಧಕಿ ಜ್ಯೋತಿ ಸಣ್ಣಕ್ಕಿ ಭೇಟಿ



ಕರ್ನಾಟಕದ ಮೊದಲ ಮಹಿಳಾ ಪ್ಯಾರಾ ಶೂಟರ್ ಹಾಗೂ ಚಿನ್ನದ ಶೂಟರ್ ಹುಡುಗಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಜ್ಯೋತಿ ಸಣ್ಣಕ್ಕಿ ಅವರು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದರು. ಅವರು ರೈಫಲ್ ಶೂಟಿಂಗ್ ಹೆಗ್ಗಳಿಕೆಗೆ ಪಾತ್ರಾಗಿರುತ್ತಾರೆ. ಒಟ್ಟು ಎಂಟು ಚಿನ್ನದ ಪದಕ, ಎರಡು ಬೆಳ್ಳಿ ಪದಕದೊಂದಿಗೆ ಭಾರತದ ರೇನೊಲ್ಡ ಪ್ಯಾರಾ ಶಾರ್ಪ ಶೂಟರ್ ಆಗಿ ಆಯ್ಕೆಗೊಂಡಿರುತ್ತಾರೆ. ಇದುವರೆಗೂ ಹನ್ನೊಂದು ಶೂಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿರುವ ಇವರು ಬೇರೆ ರಾಜ್ಯದಲ್ಲಿ ತಮ್ಮನ್ನು ಉತ್ತಮ ಶಾರ್ಪ್ ಶೂಟರ್ ಆಗಿ ಗುರುತಿಸಿಕೊಂಡಿರುವುದು ಹೆಮ್ಮೆಯ ಸಂಗತಿ.

ದಿನಾಂಕ 10.03.2019 ರಂದು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ಇವರನ್ನು ಸಂಘದ ವತಿಯಿಂದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಅಭಿನಂದಿಸಿದರು.

# ಡಾ. ಬಿ ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಅಧ್ಯಕ್ಷರಾಗಿ ಬಿ.ಕೆ. ಬಸವರಾಜು



ನವದೆಹಲಿಯ ಡಾ. ಬಿ ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಅಧ್ಯಕ್ಷರಾಗಿ ಬಿ.ಕೆ. ಬಸವರಾಜು ಆಯ್ಕೆಯಾಗಿದ್ದಾರೆ. ದಿನಾಂಕ:17-04-2019 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಸಭೆಯಲ್ಲಿ ಡಾ. ಬಿ ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್, ನವದೆಹಲಿ ಇದರ ಪದಾಧಿಕಾರಿಗಳನ್ನು, ಕಾರ್ಯಕಾರಿ ಸಮಿತಿ ಸದಸ್ಯರನ್ನು ಹಾಗೂ ಗೌರವ ಸಲಹೆಗಾರರನ್ನು ಆಯ್ಕೆ ಮಾಡಲಾಯಿತು. ವಿವರ ಇಂತಿದೆ.

ಅಧ್ಯಕ್ಷರು-ಶ್ರೀ ಬಿ.ಕೆ. ಬಸವರಾಜು ಉಪಾಧ್ಯಕ್ಷರು-ಶ್ರೀ ತ್ಯಾಗೇಶ್ ಮೂರ್ತಿ, ಮತ್ತು ಶ್ರೀ ಆರ್.ಟಿ. ನಾರಾಯಣ್, ಕಾರ್ಯದರ್ಶಿ-ಶ್ರೀ ಎಸ್. ಕುಮಾರ್, ಜಂಟಿ ಕಾರ್ಯದರ್ಶಿ-ಶ್ರೀ ಆನಂದ ಈಶ್ವರಪ್ಪ ಮುರಗೋಡ, ಖಜಾಂಚಿ-ಶ್ರೀ ರಾಧಾಕೃಷ್ಣ,

ಕಾರ್ಯಕಾರಿ ಸಮಿತಿ ಸದಸ್ಯರು: ಶ್ರೀ ಅಮರೇಶ, ಶ್ರೀ ಕೆ.ಆರ್.ವೆಂಕಟೇಶ್, ಶ್ರೀ ಎಂ.ಎನ್. ವಾಸು, ಶ್ರೀ ದೇವರಾಜ್, ಶ್ರೀಮತಿ ನೇತ್ರಾವತಿ ಕುಮಾರ್, ಶ್ರೀ ವಿಜಯಕುಮಾರ ಆರ್.ತೋರಗಲ್, ಶ್ರೀ ಸಿ. ನಟರಾಜ್, ಶ್ರೀಮತಿ ದೇವಮ್ಮ, ಶ್ರೀ ಸಿ.ಮೋಹನಕುಮಾರ್ ಗೌರವ ಸಲಹೆಗಾರರು : ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಸಿ.ಎಂ. ನಾಗರಾಜ್, ಡಾ. ಎಸ್.ಎಲ್ ಭಂಡಾರಕರ್, ಡಾ. ರಂಗನಾಥ ಎಂ. ಸಿಂಗಾರಿ, ಶ್ರೀ ಶ್ರೀನಿವಾಸ್ ಅವರನ್ನು ಆಯ್ಕೆ ಮಾಡಲಾಗಿದೆ. ತಾವುಗಳು ಈ ಸಮಿತಿಯಲ್ಲಿ ಸೇರ್ಪಡೆಗೊಳ್ಳಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಲು ಮುಕ್ತ ಅವಕಾಶ ಇದೆ. ದಯವಿಟ್ಟು ತಿಳಿಸಿ. ಕಾರ್ಯದರ್ಶಿಗಳು ಡಾ.ಬಿ.ಆರ್ ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್, ನವದೆಹಲಿ.

*ಎಸ್. ಕುಮಾರ್*

# ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಕನ್ನಡ ಶಾಲೆಯ ಉತ್ತಮ ಫಲಿತಾಂಶ

2018-19ನೇ ಸಾಲಿನ ಸಿ.ಬಿ.ಎಸ್.ಇ 12ನೇ ತರಗತಿಯ ಪರೀಕ್ಷಾ ಫಲಿತಾಂಶ ಪ್ರಕಟವಾಗಿದೆ. ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಹೆಸರಾದ ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯು ಪ್ರಸಕ್ತ 2018-19ನೇ ಸಾಲಿನ ಸಿ.ಬಿ.ಎಸ್.ಇ ನಡೆಸಿದ 12ನೇ ತರಗತಿ ಪರೀಕ್ಷೆಯಲ್ಲಿ ಶೇ. 91.54 ಫಲಿತಾಂಶವನ್ನು ದಾಖಲಿಸಿದೆ. ವಿಜ್ಞಾನ ವಿಭಾಗದಲ್ಲಿ ಶೇ. 92.8, ವಾಣಿಜ್ಯ ವಿಭಾಗದಲ್ಲಿ ಶೇ. 92.8 ಕಲಾ ವಿಭಾಗದಲ್ಲಿ ಶೇ. 86.6 ಫಲಿತಾಂಶ ದಾಖಲಾಗಿದೆ ಎಂದು ಶಾಲಾ ವ್ಯವಸ್ಥಾಪಕರಾದ ಶ್ರೀ ಶಿವಾನಂದ ಸಿರ್ಸಿಕರ್ ಅವರು ಪ್ರಕಟನೆಯಲ್ಲಿ ತಿಳಿಸಿರುತ್ತಾರೆ. ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸಿದಂತಹ ವಿದ್ಯಾ ಸಂಸ್ಥೆಯ ಪ್ರಭಾರ ಪ್ರಾಂಶುಪಾಲರಾದ ಶೀಮತಿ ಎನ್. ವಿಜಯಕುಮಾರಿ ಅವರನ್ನು, ವಿದ್ಯಾರ್ಥಿಗಳನ್ನು ಹಾಗೂ ಶಾಲಾ ಅಧ್ಯಾಪಕ ವೃಂದದವರನ್ನು ಸಂಸ್ಥೆಯ ಆಡಳಿತ ಮಂಡಳಿ ಅಭಿನಂದಿಸಿದೆ.

*ವ್ಯವಸ್ಥಾಪಕ*
*ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ*

# ಸ್ನೇಹಾ ಅಸೋಸಿಯೇಶನ್‌ನಲ್ಲಿ ಶ್ರೀರಾಮನವಮಿ ಆಚರಣೆ



ದಿನಾಂಕ 22.04.2019ರಂದು ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್, ಶ್ರೀರಾಮನವಮಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿತು.

ಆದಿನ ಶ್ರೀರಾಮನ ಸ್ಮರಣೆ ಮಾಡಿ, ಧ್ಯಾನ ಮತ್ತು ರಾಮಭಜನೆ ಮಾಡಿದರು. ಅಧ್ಯಕ್ಷೆ ಶ್ರೀಮತಿ ರಂಗಮಣಿಯವರು ರಾಮಭಜನೆಯ ಪುಸ್ತಕವನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಿದರು. ಈ ಶುಭ ಕಾರ್ಯವನ್ನು ಹಿರಿಯರಾದ ಶ್ರೀಮತಿ ಸುಮಿತ್ರಾರಾವ್, ಡಾ. ಅಹಲ್ಯಾಚಿಂತಾಮಣಿ, ಶ್ರೀಮತಿ ಪ್ರಫುಲ್ಲ ಅವರು ನೆರವೇರಿಸಿದರು.

ಸದಸ್ಯೆಯರೆಲ್ಲರೂ ಬಗೆ ಬಗೆಯ ಪ್ರಸಾದ ಮಾಡಿ ತಂದಿದ್ದರು. ಎಲ್ಲ ಸದಸ್ಯರೆಯರು ಸೇರಿ ಭಜನೆ ಹಾಡಿ ಶ್ರೀರಾಮನ ಅನುಗ್ರಹ ಪಡೆದರು. ಪ್ರಸಾದ ಹಂಚುವುದರೊಂದಿಗೆ ಆಚರಣೆ ಸಮಾಪ್ತಿಯಾಯಿತು.

*ಲೀಲಾವತಿ ಗುರುಪ್ರಸಾದ್*

# ಅಗಲಿದ ಪೋಲಿಸ್ ವರಿಷ್ಠ ಎನ್.ವಿ. ಕಿಶನ್ ಪ್ರಸಾದ್



ಮಾಜಿ ಪ್ರಧಾನಮಂತ್ರಿ ಶ್ರೀ ಎಚ್.ಡಿ. ದೇವೇಗೌಡ ಅವರ ಭದ್ರತಾ ವಿಭಾಗದ ಮುಖ್ಯಸ್ಥರಾಗಿದ್ದ ಹಿರಿಯ ಪೋಲಿಸ್ ಅಧಿಕಾರಿ ಎನ್.ವಿ. ಕೃಷ್ಣಪ್ರಸಾದ್ (75) ನಿಧನರಾಗಿದ್ದಾರೆ. ಅವರು ಹೆಚ್ಚುವರಿ ಎಸ್ಪಿ ಆಗಿ ನಿವೃತ್ತರಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ನಂದಳಿಕೆಯವರಾದ ಕಿಶನ್ ಪ್ರಸಾದ್ ಅವರು ಗುಪ್ತಚರ ಇಲಾಖೆ ಸೇರಿದಂತೆ ಉನ್ನತ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ನಂದಳಿಕೆಯ ಪ್ರಸಿದ್ಧ 'ಮಂತ್ರಿ ಮನೆ'ಗೆ ಸೇರಿದ ಅವರು ಸಾಹಿತಿ ನಂದಳಿಕೆ ವಾಸುದೇವ ರಾವ್ ಅವರ ಪುತ್ರ.

**ಪ್ರೊ. ವಿವೇಕ ರೈ ಸಂತಾಪ**

ನಂದಳಿಕೆ ಎನ್.ವಿ. ರಾವ್ ಅವರು 'ತುಳುನಾಡ ಸಿರಿ' ಕಾದಂಬರಿಯನ್ನು ಬರೆದು ಸಿರಿಯ ಕತೆಯನ್ನು ಕನ್ನಡ ನಾಡಿನಲ್ಲಿ ಪಸರಿಸಿದವರು. ಅವರ ಮಗ ಕಿಶನ್ ಪ್ರಸಾದ್ ರಾವ್ ಅವರು ಪೋಲಿಸ್ ಇಲಾಖೆಯಲ್ಲಿ ಎಸ್.ಪಿ. ಆಗಿದ್ದು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದರು. ಅವರು ಸಾಹಿತ್ಯ ಸಂಸ್ಕೃತಿ ಪ್ರೇಮಿಯಾಗಿದ್ದರು. ನಂದಳಿಕೆಯಲ್ಲಿ ಕವಿ ಮುದ್ದಣ ಸ್ಮಾರಕ ಮತ್ತು ಚಟುವಟಿಕೆಯ ಕೆಲಸಗಳಲ್ಲಿ ನಂದಳಿಕೆ ಬಾಲಚಂದ್ರ ರಾವ್ ಅವರಿಗೆ ಮಾರ್ಗದರ್ಶನವಿತ್ತಿದ್ದರು. ಅಂತಹ ಸಜ್ಜನ ಸಾಹಿತ್ಯ ಪ್ರಿಯ ಕಿಶನ್ ಪ್ರಸಾದ್ ಅವರ ನಿಧನ ಬಹಳ ವಿಷಾದದ ಸಂಗತಿ. ಅವರ ನಿಧನಕ್ಕೆ ತೀವ್ರ ಸಂತಾಪವನ್ನು ಸಲ್ಲಿಸುತ್ತೇನೆ, ಎಂದು ತಮ್ಮ ಸಂತಾಪ ಸಂದೇಶದಲ್ಲಿ ಹಿರಿಯ ವಿದ್ವಾಂಸ ಪ್ರೊ. ಬಿ.ಎ. ವಿವೇಕ ರೈ ತಿಳಿಸಿದ್ದಾರೆ.

ಅಗಲಿದ ಹಿರಿಯ ಪೋಲಿಸ್ ಅಧಿಕಾರಿ ಎನ್.ವಿ. ಕಿಶನ್ ಪ್ರಸಾದ್ ಅವರಿಗೆ ಅಂತಿಮ ನಮನಗಳು.

*ನಂದಳಿಕೆ ಬಾಲಚಂದ್ರ ರಾವ್*



## ಓದುಗರ ಸ್ಪಂದನ

ಅಭಿಮತ ಮಾಸಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ. ಅವನೀಂದ್ರನಾಥ್ ರಾವ್ ಅವರಿಗೆ ನಮಿಸಿ ಶುಭ ಹಾರೈಕೆಗಳು. ಅಭಿಮತ ಮಾಸಪತ್ರಿಕೆ ಸಮಯಕ್ಕೆ ಸರಿಯಾಗಿ ನನ್ನ ಕೈಸೇರಿ ಓದಲು ನಮ್ಮನ್ನು ಚುಂಬಕದದಂತೆ ಆಕರ್ಷಿಸುತ್ತಲಿದೆ. ಒಳ್ಳೇ ಮುದ್ರಣ, ಛಾಯಾಚಿತ್ರಗಳು, ಒಳ್ಳೆಯ ವಿಷಯಗಳ ಕುರಿತಾಗಿ ಪತ್ರಿಕೆಯ ಆಕರ್ಷಣೆ ದಿನದಿಂದ ದಿನಕ್ಕೆ ವೃದ್ಧಿಸುತ್ತಲಿದೆ. ನಿಮಗೆಲ್ಲ ಅಭಿನಂದನೆಗಳು

*ರಾಮಚಂದ್ರ ಗಣೇಶ ಭಟ್ಟ ಚಿತ್ರಗಿ, ಶಿರಸಿ*

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-



ಕರ್ನಾಟಕ ಬ್ಯಾಂಕ್ ಆರ್.ಕೆ. ಪುರಂ ಶಾಖೆಯ ಪ್ರಬಂಧಕ ಶ್ರೀ ಲಕ್ಷ್ಮೀ ನಾರಾಯಣ ರಾವ್ ಅವರು ಬೆಂಗಳೂರಿಗೆ ವರ್ಗವಾದ ಹಿನ್ನಲೆಯಲ್ಲಿ ಅವರನ್ನು ದೆಹಲಿ ಕರ್ನಾಟಕ ಸಂಘ ದಿನಾಂಕ 18.04.2019ರಂದು ಆತ್ಮೀಯವಾಗಿ ಬೀಳ್ಕೊಟ್ಟಿತು. ಶ್ರೀ ರಾವ್ ಅವರು ಜನವರಿ ನಡೆದ ದೆಹಲಿ ಕರ್ನಾಟಕ ಸಂಘದ ಚುನಾವಣೆಯ ಸಹಾಯಕ ಚುನಾವಣಾ ಅಧಿಕಾರಿಯಾಗಿಯೂ ಕಾರ್ಯ ನಿರ್ವಹಿಸಿದ್ದರು.


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Delhi Karnataka Sangha's Abhimatha
May-2019, Vol. No.29, Issue No.8, Price Rs.1/-
RNI Regn. No. 53405/91, DL-SW-1/4016/19-21
Date of Publication : May 8th / 9th, Posting Date :10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y




ದೆಹಲಿ ಕರ್ನಾಟಕ ಸಂಘ ಮತ್ತು ಗುರುಗಾಂವ್ ಕನ್ನಡ ಸಂಘದ ಸಂಯುಕ್ತಾಶ್ರಯದಲ್ಲಿ ದಿನಾಂಕ 28.04.2019ರಂದು ಗುರುಗಾಂವ್‌ನಲ್ಲಿ ನಡೆದ ಯುಗಾದಿ ಸಾಂಸ್ಕೃತಿಕ ಮಿಲನ ಕಾರ್ಯಕ್ರಮದ ಕೊನೆಯಲ್ಲಿ ತೆಗೆದ ಸಮೂಹ ಚಿತ್ರ